

# ಭೃಗುವಾಣಿ

ಆನಂದ ಬಳಗದ ತ್ರೈಮಾಸಿಕ ಪತ್ರಿಕೆ

ಸಂಪುಟ 33 | ಏಪ್ರಿಲ್ – ಜೂನ್ 2020 | ರೂ. 10/– | ಸಂಚಿಕೆ 01





ಸಂಭ್ರಮದ ವಾರ್ಷಿಕೋತ್ಸವ





ಮನರಂಜನೆಯ ಆನಂದ ಮಿಲನ

ಖುಷಿ ತಂದ ಕ್ರೀಡಾ ಮಿಲನ



*With best compliments from :*

# TEDMAG ENGINEERING & MANAGEMENT CONSULTANTS (P) LTD.


**SWAGAT, 1209, 11th CROSS,**
**HSR LAYOUT SECTOR I,**
**BANGALORE – 560 102.**

**TEL.: +91 (0)80 22586129**
**FAX: +91 (0)80 22589134**

**E-mail:**

**Bangalore : tedmagemc@hotmail.com**
**sridhar_bhat@yahoo.com**
**Chennai : myram47@gmail.com**
**Mumbai : mindi1940@yahoo.com**


- **MILK PROCESSING**
- **FOOD PROCESSING**
- **PLANT TISSUE CULTURE**
- **ALLIED INDUSTRIES**

ಭೃಗುವಾಣಿ
ಆನಂದ ಬಳಗದ ತ್ರೈಮಾಸಿಕ ಪತ್ರಿಕೆ

ಸಂಪುಟ 33 ಸಂಚಿಕೆ 01

ಅಧ್ಯಕ್ಷರು :
**ವಿಜಯಲಕ್ಷ್ಮಿ ಭಟ್ ಎಸ್.**

ಕಾರ್ಯದರ್ಶಿ :
**ಎಂ. ಕೆ. ಗುರುಮೂರ್ತಿ**

ಸಂಪಾದಕರು :
**ಎಂ. ಸತ್ಯನಾರಾಯಣ ಭಟ್**

ಸಂಪಾದಕ ಮಂಡಳಿ :
**ಹರಿದಾಸ ಮುನ್ನೂರು**
**ಡಿ. ಶರತ್ ಕುಮಾರ ಭಟ್**
**ಕೆ.ಎನ್. ಅಡಿಗ**
**ರಂಜಿತ್ ಯಡಪಾಡಿತ್ತಾಯ**
**ವೈ. ಜಯಂತರಾವ್**
**ಟಿ.ಎಸ್. ನಾಗರಾಜ ಉಪಾಧ್ಯಾಯ**
**ಎಂ. ಕೃಷ್ಣ ಪ್ರಸಾದ್**

ಸಲಹೆಗಾರರು :
**ಶ್ರೀ ಎಸ್. ಹರಿದಾಸ ಉಪಾಧ್ಯ**

ಜಾಹೀರಾತು ಸಮನ್ವಯ :
**ಶ್ರೀ ವೈ. ರಾಧಾಕೃಷ್ಣ**
**ಶ್ರೀ ಬಿ.ಎಸ್. ಬಾಲಚಂದ್ರ ತೋಳ್ಪಾಡಿ**

ಛಾಯಾಚಿತ್ರಗಳು
**ಕೆ. ಬಾಲಕೃಷ್ಣ ಉಪಾಧ್ಯಾಯ**
**ಮಟ್ಟಿ ರಾಮಚಂದ್ರರಾವ್**

ವಿಳಾಸ :
**ಆನಂದ ಬಳಗ**
ಹೋಟೆಲ್ ಅಜಂತಾ ಆವರಣ
22ಎ, ಎಂ.ಜಿ. ರಸ್ತೆ
ಬೆಂಗಳೂರು – 560 001
ದೂರವಾಣಿ : 2559 4457

Website:
www.anandabalaga.org



# ಅಧ್ಯಕ್ಷರ ಮಾತು......

ನಲ್ಮೆಯ ಸದಸ್ಯ ಬಂಧುಗಳೇ,

ನಮ್ಮೆಲ್ಲರ ಅಚ್ಚುಮೆಚ್ಚಿನ ಆನಂದ ಬಳಗದ ಅಧ್ಯಕ್ಷೆಯಾಗುವ ಸುಯೋಗ ನನ್ನ ಪಾಲಿಗೆ ಬಂದಿದೆ. ನಾನು ಇದನ್ನು ನಿರೀಕ್ಷಿಸದಿದ್ದರೂ, 2020–22ನೇ ಸಾಲಿನ ಕಾರ್ಯಕಾರಿ ಸಮಿತಿಯವರು ಪ್ರೀತಿಯಿಂದ ಒತ್ತಾಯಿಸಿದಾಗ, ಅವರೆಲ್ಲರ ಅಭಿಮಾನಕ್ಕೆ ಕಟ್ಟುಬಿದ್ದು ಒಪ್ಪಿಕೊಳ್ಳಲೇಬೇಕಾಯಿತು. ಆನಂದ ಬಳಗ ನನಗೆ ಹೊಸದೇನಲ್ಲ. ಕಳೆದ ಹಲವು ವರ್ಷಗಳಿಂದ ಬಳಗದ ಜೊತೆಗೆ ನಿಕಟ ಸಂಪರ್ಕ ಮತ್ತು ಸಂಬಂಧವಿರಿಸಿಕೊಂಡಿದ್ದ ನಾನು, ಇದೀಗ ಈ ಬಳಗದ ನೇತೃತ್ವ ವಹಿಸುವ ಜವಾಬ್ದಾರಿ ಬಂದಿದೆ. ಸದಸ್ಯರೆಲ್ಲರ ಸಹಕಾರ, ಕಾರ್ಯಕಾರಿ ಸಮಿತಿಯ ಸಕಾಲಿಕ ಮಾರ್ಗದರ್ಶನದಿಂದಾಗಿ ಈ ಜವಾಬ್ದಾರಿ ನಿರ್ವಹಣೆ ಹಗುರವಾಗಲಿದೆ ಎಂಬ ದೃಢವಿಶ್ವಾಸ ನನಗಿದೆ. ತನ್ನದೇ ಆದ ಹಿರಿಮೆ–ಗರಿಮೆ–ಹೆಗ್ಗಳಿಕೆಯನ್ನು ಹೊಂದಿರುವ ಆನಂದ ಬಳಗದ ಅಧ್ಯಕ್ಷೆಯಾಗಿ, ಬಳಗಕ್ಕೆ ಕೈಲಾದಷ್ಟು ಸೇವೆ ಮಾಡುವ ಸದವಕಾಶವನ್ನು ಕಲ್ಪಿಸಿದ ಎಲ್ಲರಿಗೂ ಆಭಾರಿಯಾಗಿದ್ದೇನೆ.

ನೂತನ ವರ್ಷ ಶಾರ್ವರಿಯ ಜೊತೆಗೆ ಬಂದಂತಹ ಕರೋನ ಮಹಾಮಾರಿ ಜಗತ್ತಿನಾದ್ಯಂತ ತನ್ನ ಕ್ರೂರವಾದ ಅಟ್ಟಹಾಸವನ್ನು ಮೆರೆಯುತ್ತಿದೆ. ಜೀವ ಮುಖ್ಯವೋ ಜೀವನ ಮುಖ್ಯವೋ ಎಂಬ ಸಂದಿಗ್ಧವನ್ನು ನಮ್ಮೆದುರಿಗೆ ತಂದ ಈ ಕಾಯಿಲೆ ಮಾಸ್ಕ್ ಧರಿಸುವುದು, ವ್ಯಕ್ತಿಗತ ಅಂತರವನ್ನು ಕಾಪಾಡುವುದು, ಆರೋಗ್ಯಕರ ಜೀವನಶೈಲಿಯ ಅಳವಡಿಕೆ, ಆಹಾರ–ವಿಹಾರದಲ್ಲಿ ನಿಯಂತ್ರಣ ಮೊದಲಾದ ಪಾಠಗಳನ್ನು ಕಲಿಸುತ್ತಿದೆ. ಆತ್ಮ ನಿರ್ಭರ ಭಾರತ, ಸ್ವಾವಲಂಬಿ ಭಾರತ, ಸ್ವದೇಶಿ ಚಳವಳಿ ಹೀಗೆ ಎಲ್ಲರಲ್ಲೂ ಆತ್ಮಾಭಿಮಾನದ ಸೆಲೆ ಗೋಚರವಾಗುತ್ತಿದೆ. ಸಂಕಟದ ಮಧ್ಯೆಯೂ ಮಾನವೀಯತೆಯ ಹಲವು ಆಯಾಮಗಳು ತೆರೆದುಕೊಂಡಿದ್ದು ಸ್ವಲ್ಪ ಮಟ್ಟಿನ ಸಾಂತ್ವನ ಒದಗಿಸುತ್ತಿದೆ. ಕರೋನಾ ಆತಂಕ ಆದಷ್ಟು ಬೇಗ ಮರೆಯಾಗಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುವುದು ಬಿಟ್ಟು ನಾವೇನೂ ಮಾಡುವಂತಿಲ್ಲ.

ಈ ವಿಷಮ ಪರಿಸ್ಥಿತಿ ಆನಂದ ಬಳಗವನ್ನು ತುಸುಮಟ್ಟಿಗೆ ನಿಷ್ಕ್ರಿಯ ಮಾಡಿಬಿಟ್ಟಿದೆ. ವರ್ಷಂಪ್ರತಿ ನಡೆಯುವ ವಸಂತೋತ್ಸವ, ಪ್ರತಿಭಾ ಮೇಳ ಮತ್ತಿತರ ಕಾರ್ಯಕ್ರಮಗಳನ್ನು ಸಂಯೋಜಿಸಲು ಅಸಾಧ್ಯವಾಗುತ್ತಿದೆ. ಪರಿಸ್ಥಿತಿಯನ್ನು ಅವಲಂಬಿಸಿ, ಮುಂದಿನ ಕಾರ್ಯಕ್ರಮಗಳ ಬಗ್ಗೆ ಜಾಗರೂಕತೆಯಿಂದ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾಗಿದೆ. ಆದರೂ ನಮ್ಮ ಉಪವಿಭಾಗದವರು ಸಂಪೂರ್ಣವಾಗಿ ಸುಮ್ಮನೆ ಕೂತಿಲ್ಲ. ಸವಾಲನ್ನೇ ಅವಕಾಶವನ್ನಾಗಿ ಮಾರ್ಪಡಿಸುವಲ್ಲಿ ಜಾಣ್ಮೆಯನ್ನು ತೋರಿದ ಯುವ ವಿಭಾಗ ಫೋಟೋ ಸ್ಪರ್ಧೆ, ಮಧುರಗಾನ ಸ್ಪರ್ಧೆಗಳನ್ನು ಆನ್–ಲೈನ್ ಮೂಲಕವೇ ನಡೆಸಿ, ಸದಸ್ಯರಲ್ಲಿ ಚೈತನ್ಯವನ್ನು ತುಂಬಿದ್ದಾರೆ. ಮಾಧ್ಯಮ ಮತ್ತು ಸಂವಹನ ವಿಭಾಗದವರು ಬಳಗದ ವೆಬ್‌ಸೈಟ್‌ನ ಸುಧಾರಣೆಗಾಗಿ ಈ ಸಂದರ್ಭವನ್ನು ಬಳಸಿಕೊಂಡಿದ್ದಾರೆ. ಕರೋನಾ ಸಂಕಷ್ಟದಲ್ಲಿರುವವರಿಗೆ ಕೈಲಾದಷ್ಟು ಮಟ್ಟಿಗೆ ಆಹಾರ ಸಾಮಾಗ್ರಿ, ದಿನಸಿ ಹಾಗೂ ನಗದು ರೂಪದಲ್ಲಿ ನೆರವನ್ನು ನೀಡುವುದರಲ್ಲೂ ಬಳಗ ಹಿಂದೆ ಬಿದ್ದಿಲ್ಲ. ಸಮಾಜಮುಖಿಯಾದ ಸತ್ಕಾರ್ಯಗಳ ಮೂಲಕ ಜನಜೀವನದಲ್ಲಿ ಆನಂದ ತರುವುದೇ ಬಳಗದ ಪ್ರಧಾನ ಉದ್ದೇಶ ಎಂದು ಮತ್ತೊಮ್ಮೆ ಸಾದರಪಡಿಸಲು ಬಳಗವು ಶ್ರಮಿಸಿದೆ. ಈ ನಿಟ್ಟಿನಲ್ಲಿ ಸಹಕರಿಸಿದ ಸರ್ವರಿಗೂ ನನ್ನ ಹಾರ್ದಿಕ ಅಭಿನಂದನೆಗಳು.

ಯಾವುದೇ ಸಂಸ್ಥೆ ಅಧ್ಯಕ್ಷರಿಂದ ಮಾತ್ರ ನಡೆಯಲಾರದು ಎಂಬ ಅರಿವು ನನಗಿದೆ. ನನ್ನ ಅಭಿಪ್ರಾಯದಲ್ಲಿ ಅಧ್ಯಕ್ಷಗಿರಿ ಕೇವಲ ಅಲಂಕಾರಿಕ ಸ್ಥಾನ. ಬಳಗದ ಉಪಾಧ್ಯಕ್ಷರು, ಕಾರ್ಯದರ್ಶಿ, ಕೋಶಾಧಿಕಾರಿ, ಕಾರ್ಯಕಾರಿ ಸಮಿತಿಯ ಸದಸ್ಯರು, ವಿವಿಧ ಉಪ ವಿಭಾಗಗಳ ಸಂಚಾಲಕರು ಮತ್ತು ಅವರ ಕ್ರಿಯಾಶೀಲ ಕಾರ್ಯತಂಡ ಮತ್ತು ಎಲ್ಲದಕ್ಕಿಂತಲೂ ಹೆಚ್ಚಾಗಿ ಬಳಗದ ಸದಸ್ಯರ ಸಂಪೂರ್ಣ ಸಹಕಾರ ಮತ್ತು ಸಕ್ರಿಯತೆ ಇದ್ದಾಗ ಮಾತ್ರಾ ಬಳಗ ಮುನ್ನಡೆಯಬಹುದು. ಮುಂದಿನ ಎರಡು ವರ್ಷಗಳ ಅವಧಿಯಲ್ಲಿ ನಾವೆಲ್ಲರೂ ಜೊತೆಗೂಡಿ ನಮ್ಮೆಲ್ಲರ ಬಳಗವನ್ನು ಇನ್ನಷ್ಟು ಪ್ರಗತಿ ಪಥದತ್ತ ಕೊಂಡೊಯ್ಯಲು ಹಾಗೂ ಬಳಗದ ಕೀರ್ತಿ ಮತ್ತಷ್ಟು ವೃದ್ಧಿಸಲು ಶ್ರಮಿಸೋಣ. ಈ ನಿಟ್ಟಿನಲ್ಲಿ ಸದಾ ನಿಮ್ಮ ಸಹಕಾರ, ಸಲಹೆ ಮತ್ತು ಮಾರ್ಗದರ್ಶನವನ್ನು ಕೋರುತ್ತೇನೆ.

ಶುಭಾಶಯಗಳೊಂದಿಗೆ

**(ವಿಜಯಲಕ್ಷ್ಮಿ ಭಟ್ ಎಸ್.)**

## Executive Committee Members : 2020-2022

| Name | Contact Numbers |
|---|---|
| ***President*** | |
| Smt. Vijayalakshmi Bhat S. | 98441 52107 |
| ***Vice Presidents*** | |
| B. Ramachandra Upadhya | 99024 00072 |
| S. Haridas Upadhya | 94480 01892 |
| ***Secretary*** | |
| M.K. Gurumurthy | 98440 22692 |
| ***Joint Secretary*** | |
| A. Sandeep Rao | 98450 98150 |
| ***Treasurer*** | |
| B.S. Balachandra Tolpadi | 94481 34268 |
| ***Convener, Cultural Wing*** | |
| Smt. Shobha Radhakrishna | 98447 25547 |
| **Convener, Religious Wing** | |
| P N Vishnumurthy Kuddannaya | 94803 05426 |
| **Convener, Youth Wing** | |
| K. Gopala Krishna | 99801 28049 |
| ***Convener, Edn. Assistance Programme*** | |
| Sharath Chandra S.N. | 98860 40271 |
| ***Convener, Public Relation Wing*** | |
| Y. Jayantha Rao | 94482 74519 |
| ***Convener, Membership Devt. Wing*** | |
| M. Krishna Prasad | 98450 18183 |
| ***Convener, Community Services*** | |
| Dr. K.N. Adiga Adoor | 94488 48154 |
| ***Convener, Media & Communications*** | |
| M. Dinesh Rao | 98456 88955 |
| ***Editor, Brughu Vani*** | |
| M. Sathyanarayana Bhat | 99458 02607 |
| ***Members*** | |
| Smt. Geetha Vasudeva Rao | 98808 99997 |
| H. Ramesh Bhat | 98450 24708 |
| P.C. Rao | 98444 46309 |
| T.S. Nagaraja Upadhyaya | 93412 26763 |
| M Mohan Rao | 98453 79956 |
| ***Permanent Invitees / Past Presidents*** | |
| P.S. Bagilthaya | 98440 83582 |
| K. Vasudeva Rao | 98450 57111 |
| U A P Ballal | 99860 28602 |
| S T R Madi | 99029 77948 |
| ***Special Invitees*** | |
| Smt. Sudha M Rao | 99011 27738 |
| U V Krishna Murthy | 98440 24136 |
| Dr. (Smt.) Veena Sharath | 99860 80271 |
| Y. Sripathy Bhat | 65626972 |
| Smt. Geetha P.R. Rao | 99459 38411 |
| Y. Radha Krishna | 98440 58851 |
| Prakash K Bhat | 98455 06777 |
| N Srinivasa Rao | 98455 22165 |

ಒಳಪುಟಗಳಲ್ಲಿ.....


| | | |
|---|---|---|
| ಅಧ್ಯಕ್ಷರ ಮಾತು | ... | 1 |
| ನಿರ್ಗಮಿತ ಅಧ್ಯಕ್ಷ ಮನದಾಳದ ಮಾತು | ... | 3 |
| ನೂತನ ಕಾರ್ಯಕಾರಿ ಸಮಿತಿ | ... | 4 |
| ನೂತನ ಅಧ್ಯಕ್ಷರ ಪರಿಚಯ | ... | 5 |
| ಬಳಗದ ವಾರ್ಷಿಕೋತ್ಸವ | ... | 6 |
| ಕೋವಿಡ್ ಸಂತ್ರಸ್ಥರಿಗೆ ಸಹಾಯ | ... | 9 |
| ಆನಂದ ಮಿಲನ | ... | 10 |
| ಕ್ರೀಡಾ ಮಿಲನ | ... | 12 |
| ವಿಶೇಷ ದಿನಗಳು | ... | 14 |
| ಮಧುರಗಾನ ಆನ್‌ಲೈನ್ ಸ್ಪರ್ಧೆ | ... | 15 |
| ಫೋಟೋಗ್ರಫಿ ಸ್ಪರ್ಧೆ | ... | 17 |
| ಮಹಿಳಾ ವಿಭಾಗದ ಪ್ರವಾಸ | ... | 19 |
| ಸುದ್ದಿ ಸಂಗ್ರಹ | ... | 23 |


ಭೃಗುವಾಣಿ ತ್ರೈಮಾಸಿಕದಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯಗಳ ಪೂರ್ಣ ಜವಾಬ್ದಾರಿಯು ಲೇಖಕರದ್ದೇ ಆಗಿರುತ್ತದೆ, ವಿನಹ ಸಂಪಾದಕ ಮಂಡಳಿಯದಲ್ಲ.

## ಸದಸ್ಯರಲ್ಲಿ ಮನವಿ

ಭೃಗುವಾಣಿ ನಿಮ್ಮ ಪತ್ರಿಕೆ. ನೀವು ಕಳುಹಿಸುವ ಲೇಖನ, ಕವನ, ಸಾಧನೆ–ಪರಿಚಯ, ಫೋಟೋಗ್ರಾಫ್, ಚುಟುಕು, ಹಾಸ್ಯ ಚಟಾಕಿ. ಮೊದಲಾದುವುಗಳಿಗೆ ಪ್ರಥಮ ಪ್ರಾಶಸ್ತ್ಯ. ಅದಲ್ಲದೆ ಸದಸ್ಯರ ಕುಟುಂಬದಲ್ಲಿ ನಡೆದ ಯಾವುದೇ ಸಮಾರಂಭದ ಬಗ್ಗೆ ಸಂಕ್ಷಿಪ್ತ ಮಾಹಿತಿಯನ್ನು ಅಥವಾ ಆಮಂತ್ರಣ ಪತ್ರಿಕೆಯನ್ನು ಕಳುಹಿಸಿದರೆ, ಸುದ್ಧಿ–ಸಂಗ್ರಹ ಅಂಕಣದಲ್ಲಿ ಪ್ರಕಟಿಸಲು ಅನುಕೂಲ.

ಭೃಗುವಾಣಿ ಪತ್ರಿಕೆಯಲ್ಲಿ ನಿಮ್ಮದೂ ಪಾಲು ಇರಲಿ.. ಪ್ರಕಟಣೆಗೆ ಪರಿಗಣಿಸಲು ಲೇಖನ ಮತ್ತಿತರ ವಿಚಾರ ಗಳನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸಬಹುದಾಗಿದೆ :


**ಎಂ. ಸತ್ಯನಾರಾಯಣ ಭಟ್**
"ಕೃಷ್ಣ ಕೃಪಾ", 12/1, 5ನೇ ಮೈನ್, ಇಟ್ಟುಮಡು
ಬನಶಂಕರಿ 3ನೇ ಸ್ಟೇಜ್, ಬೆಂಗಳೂರು–560 085
E-mail: msbhat1958@gmail.com

# ನಿರ್ಗಮಿತ ಅಧ್ಯಕ್ಷರ ಮನದಾಳದ ಮಾತುಗಳು



ಸಹೃದಯ ಬಂಧುಗಳೇ,

ತಮಗೆಲ್ಲಾ ಶಾರ್ವರೀ ಸಂವತ್ಸರದ ಹಾರ್ದಿಕ ಶುಭಾಶಯಗಳು. ಹೊಸ ಸಂವತ್ಸರವು ಹೊಸ ಹುರುಪು, ಸಂತಸ ತರುವುದರ ಬದಲಾಗಿ ಈ ವರ್ಷ ಕೊರೋನಾ ಎಂಬ ಮಹಾ ಮಾರಿಯ ಕೆಟ್ಟ ಅಟ್ಟಹಾಸದೊಂದಿಗೆ ಆರಂಭವಾಗಿದೆ. ಈ ಪಿಡುಗು ಆದಷ್ಟು ಬೇಗ ಜಗತ್ತಿನಿಂದ ದೂರವಾಗಿ ಪ್ರಪಂಚದಾದ್ಯಂತ ಆರೋಗ್ಯ ಶಾಂತಿ, ನೆಮ್ಮದಿ, ಮತ್ತೆ ಬರುವಂತಾಗಲಿ ಎಂದು ಪರಮಾತ್ಮನಲ್ಲಿ ಪ್ರಾರ್ಥಿಸುವುದನ್ನು ಹೊರತಾಗಿ ನಾವೇನೂ ಮಾಡುವಂತಿಲ್ಲ.

ಬಂಧುಗಳೇ, ನಾಲ್ಕು ವರ್ಷಗಳ ಹಿಂದೆ ಆನಂದ ಬಳಗದ ಅಧ್ಯಕ್ಷೆಯಾಗಬೇಕೆಂದು ಕಾರ್ಯಕಾರಿ ಸಮಿತಿಯವರು ಕೇಳಿಕೊಂಡಾಗ, ಅವರ ಪ್ರೀತಿಯ ಒತ್ತಾಯ ಮತ್ತು ಅಭಿಮಾನಕ್ಕೆ ಕಟ್ಟುಬಿದ್ದು ಮನಸ್ಸಿಲ್ಲದ ಮನಸ್ಸಿನಿಂದ ಒಪ್ಪಿಕೊಳ್ಳಬೇಕಾಯಿತು. ಆದರೆ ದಿನಗಳು ಕಳೆದಂತೆ, ಈ ಸ್ಥಾನವು ಸದಸ್ಯರ ಹೃದಯಕ್ಕೆ ಹತ್ತಿರವಾಗಲು ಉತ್ತಮ ಅವಕಾಶ ಎಂದು ಅರಿವಾಗಿ, ಕಳೆದ ನಾಲ್ಕು ವರ್ಷದ ಅವಧಿ ಮುಕ್ತಾಯವಾಗಿದ್ದೇ ಗೊತ್ತಾಗಲಿಲ್ಲ. ತನ್ನದೇ ಆದ ಹಿರಿಮೆ - ಗರಿಮೆಯನ್ನು ಹೊಂದಿರುವ ಆನಂದ ಬಳಗದ ಅಧ್ಯಕ್ಷ ಗಿರಿಯ ಮಹಾನ್ ಜವಾಬ್ದಾರಿಯ ಕೆಲಸ ಕಾರ್ಯಕಾರಿ ಸಮಿತಿಯವರು ನೀಡಿರುವ ಬೆಂಬಲ, ಉಪಾಧ್ಯಕ್ಷರಾದ ಶ್ರೀ ಬಾ. ರಾಮಚಂದ್ರ ಉಪಾಧ್ಯ ಮತ್ತು ಶ್ರೀಮತಿ ವಿಜಯಲಕ್ಷ್ಮಿ ಭಟ್‌ರವರು ನೀಡಿದ ಸಕಾಲಿಕ ಸಹಕಾರ ಹಾಗೂ ಕಾರ್ಯದರ್ಶಿಯವರಾದ ಶ್ರೀ ಹರಿದಾಸ ಉಪಾಧ್ಯರವರ ಸಮರ್ಥ ಕಾರ್ಯ ನಿರ್ವಹಣೆಯಿಂದಾಗಿ ಬಹಳಷ್ಟು ಸುಲಭ ಹಾಗೂ ಹಗುರವಾಗಿದೆ. ಬಳಗದ ಸರ್ವಸದಸ್ಯರು, ಪ್ರೀತಿಯಿಂದ ನೀಡಿದ ಸಹಕಾರ ಮತ್ತು ಸಕಾಲಿಕ ಮಾರ್ಗ ದರ್ಶನವನ್ನು ಎಂದೂ ಮರೆಯುವಂತಿಲ್ಲ.

ಬಳಗದ ವಿವಿಧ ಉಪ-ವಿಭಾಗಗಳ ಸಂಚಾಲಕರು ತಮ್ಮ ತಮ್ಮ ಜವಾಬ್ದಾರಿಯನ್ನು ಅರಿತು, ಸಮರ್ಪಕ ವಾಗಿ ಕಾರ್ಯ ನಿರ್ವಹಿಸಿದ್ದು, ಸಂಚಾಲಕರಿಗೆ ಮತ್ತು ಅವರ ಕಾರ್ಯ ತಂಡಕ್ಕೆ ಧನ್ಯವಾದಗಳು.

ಈ ನಾಲ್ಕು ವರ್ಷಗಳ ಅವಧಿಯಲ್ಲಿ ಬಳಗ ಅನೇಕ ಮೈಲುಗಲ್ಲುಗಳನ್ನು ದಾಟಿದೆ. ತನ್ನದೇ ಆದ ಇತಿಮಿತಿಯಲ್ಲಿ ಸಾಕಷ್ಟು ಮುನ್ನಡೆಯನ್ನು ಸಾಧಿಸಿದೆ. ಸದಸ್ಯರ ಬೇಕು-ಬೇಡಗಳಿಗೆ ಸೂಕ್ತವಾಗಿ ಸ್ಪಂದಿಸಿ, ಅವರಿಗೆ ಮತ್ತಷ್ಟು, ಮಗದಷ್ಟು ಹತ್ತಿರವಾಗಲು ಶ್ರಮಿಸಿದೆ ಎಂಬ ಸಮಾಧಾನ, ತೃಪ್ತಿ ನನಗಿದೆ. ನನ್ನ ಆತ್ಮೀಯರಾದ ಹಲವು ವರ್ಷಗಳ ಕಾಲ ಬಳಗದ ಆಗು-ಹೋಗುಗಳಲ್ಲಿ ತನ್ನನ್ನು ಸಕ್ರಿಯವಾಗಿ ತೊಡಗಿಸಿಕೊಂಡಿರುವ ಶ್ರೀಮತಿ ವಿಜಯಲಕ್ಷ್ಮಿ ಭಟ್‌ರವರು ನೂತನ ಅಧ್ಯಕ್ಷರಾಗಿ, ಬಳಗವನ್ನು ಮುನ್ನಡೆಸಲಿದ್ದಾರೆ. ಅವರಿಗೆ ನನ್ನ ಪ್ರೀತಿಯ ಅಭಿನಂದನೆಗಳು. ಹೊಸ ಕಾರ್ಯಕಾರಿ ಸಮಿತಿಯ ಸದಸ್ಯರಿಗೂ ಶುಭ ಹಾರೈಕೆಗಳು. ಅಧ್ಯಕ್ಷ ಸ್ಥಾನದಿಂದ ನಿರ್ಗಮಿಸಿದರೂ, ಬಳಗದ ಜೊತೆ ಸಕ್ರಿಯವಾಗಿದ್ದು, ಮುಂದಿನ ದಿನಗಳಲ್ಲೂ ಬಳಗದ ಸೇವೆಯನ್ನು ಮಾಡುವ ಶಕ್ತಿ ಮತ್ತು ಅವಕಾಶಗಳನ್ನು ಭಗವಂತ ಕರುಣಿಸಲಿ ಎಂದೇ ನನ್ನ ಪ್ರಾರ್ಥನೆ. ಮತ್ತೊಮ್ಮೆ ಧನ್ಯವಾದಗಳೊಂದಿಗೆ.

– ಗೀತಾ ವಾಸುದೇವರಾವ್

## * ವಿಶ್ವೇಶ ವಾಣಿ *

ಒಬ್ಬ ಶ್ರೀಮಂತ ತನ್ನ ತೋಟದಲ್ಲಿ ಬೆಳೆದಿದ್ದ ಒಂದು ಬಾಳೆಯ ಗೊನೆಯನ್ನು ತನ್ನ ತೋಟದಲ್ಲಿ ಕೆಲಸ ಮಾಡುವವನ ಕೈಯಲ್ಲಿ ಕೊಟ್ಟು ಇದನ್ನು ದೇವಸ್ಥಾನದಲ್ಲಿ ಕೊಟ್ಟು ಬಾ ಎಂದು ಹೇಳಿ ಕಳಿಸಿದನು.

ಆ ಕೆಲಸದವ ದಾರಿಯಲ್ಲಿ ತುಂಬಾ ಹಸಿವಾಗಿ ಎರಡು ಹಣ್ಣನ್ನ ತಿಂದು ಬಿಡುತ್ತಾನೆ. ಮಿಕ್ಕಿದ್ದನ್ನ ದೇವಸ್ಥಾನದಲ್ಲಿ ಕೊಟ್ಟು ಮನೆಗೆ ಹಿಂತಿರುಗುತ್ತಾನೆ.

ಅಂದು ರಾತ್ರಿ ದೇವರು ಆ ಶ್ರೀಮಂತನ ಕನಸಲ್ಲಿ ಬಂದು ನೀನು ಕಳುಹಿಸಿದ ಎರಡು ಹಣ್ಣನ್ನು ನಾನು ತಿಂದೆ, ತುಂಬಾ ಚೆನ್ನಾಗಿತ್ತು, ಎಂದು ಹೇಳಿ ಮರೆಯಾಗಿಬಿಟ್ಟರು. ದೇವರ ಮಾತನ್ನು ಕೇಳಿದ ಆ ಶ್ರೀಮಂತ ಕೋಪಗೊಂಡ. ನಾನು ಒಂದು ಗೊನೆ ಹಣ್ಣನಲ್ಲವೇ ದೇವರಿಗೆ ಕಳುಹಿಸಿದ್ದು, ಮತ್ತೆ ದೇವರು ಯಾಕೆ ಎರಡು ಹಣ್ಣನ್ನ ಮಾತ್ರ ತಿಂದೆ ಎಂದರು ಎಂದು. ಕೋಪದಲ್ಲಿ ಆ ಕೆಲಸದವನನ್ನ ವಿಚಾರಿಸಿದರು ಆಗ ಕೆಲಸದವನು ವಿವರಿಸಿದ, ದಾರಿಯಲ್ಲಿ ಹಸಿವಾಗಿ ಎರಡು ಹಣ್ಣನ್ನ ನಾನೇ ಬುದ್ದಿ ತಿಂದಿದ್ದು, ನನ್ನನ್ನ ಕ್ಷಮಿಸಿ ಎಂದು. ಆಗ ಆ ಶ್ರೀಮಂತನಿಗೆ ಅರ್ಥವಾಯಿತು ಕೆಲಸದವನು ತಿಂದ ಎರಡು ಹಣ್ಣು ಮಾತ್ರ ದೇವರಿಗೆ ಹೋಗಿ ಸೇರಿದೆ ಎಂದು. ಅಂದು ಒಂದು ವಿಷಯ ಅರ್ಥವಾಯಿತು ಆ ಶ್ರೀಮಂತನಿಗೆ ಒಬ್ಬ ಬಡವ ಅಥವಾ ಹಸಿದವನು ತಿಂದರೆ ಭಗವಂತ ತಿಂದ ಹಾಗೆ ಎಂದು.

ದೇವರ ಪ್ರತೀಕಗಳು ಎರಡು. ಒಂದು ಚಲ. ಇನ್ನೊಂದು ಅಚಲ. ಅಚಲ ಪ್ರತೀಕದಲ್ಲಿ ದೇವರನ್ನು ಕಾಣುವದಕ್ಕಿಂತಲೂ ಚಲ ಪ್ರತೀಕದಲ್ಲಿ ದೇವರನ್ನು ಕಾಣುವುದು ಹೆಚ್ಚು ಫಲಪ್ರದ.

ಅಚಲ ಪ್ರತೀಕ ಪೂಜೆ ಬೇಡವೆಂದಲ್ಲ. ಬೇಕೇ ಬೇಕು. ಆದರೆ ಚಲ ಪ್ರತೀಕ ಸೇವೆ ಮರೆಯದಿರಿ.

# ಆನಂದ ಬಳಗ
# 2020-2022ರ ಅವಧಿಗೆ
# ನೂತನ ಕಾರ್ಯಕಾರಿ ಸಮಿತಿ

ಆನಂದ ಬಳಗದಲ್ಲಿ ಕಳೆದ ಹಲವಾರು ವರ್ಷಗಳಿಂದ ಅನುಪಮ ಸೇವೆ ಸಲ್ಲಿಸಿದ ಶ್ರೀಮತಿ ವಿಜಯಲಕ್ಷ್ಮಿ ಭಟ್ ಎಸ್. ಅವರನ್ನು ಮುಂದಿನ ಎರಡು ವರ್ಷಗಳ ಅವಧಿಗೆ ಅಧ್ಯಕ್ಷರಾಗಿ ಹೊಸ ಕಾರ್ಯಕಾರಿ ಸಮಿತಿಯು ಸರ್ವಾನುಮತದಿಂದ ಆಯ್ಕೆ ಮಾಡಿರುತ್ತದೆ. ಶ್ರೀಮತಿ ವಿಜಯಲಕ್ಷ್ಮಿ ಭಟ್‌ರವರ ನೇತೃತ್ವದ 2020 – 2022ರ ಕಾರ್ಯಕಾರಿ ಸಮಿತಿಯ ಪದಾಧಿಕಾರಿಗಳ ವಿವರ ಈ ರೀತಿ ಇದೆ;

| | | |
|---|---|---|
| ಅಧ್ಯಕ್ಷರು | : | **ಶ್ರೀಮತಿ ವಿಜಯಲಕ್ಷ್ಮಿ ಭಟ್** |
| ಉಪಾಧ್ಯಕ್ಷರು | : | **ಶ್ರೀ ಬಾ. ರಾಮಚಂದ್ರ ಉಪಾಧ್ಯ** |
| | | **ಶ್ರೀ ಹರಿದಾಸ್ ಎಸ್. ಉಪಾಧ್ಯ** |
| ಕಾರ್ಯದರ್ಶಿ | : | **ಶ್ರೀ ಎಂ.ಕೆ. ಗುರುಮೂರ್ತಿ** |
| ಜೊತೆ ಕಾರ್ಯದರ್ಶಿ | : | **ಶ್ರೀ ಎ. ಸಂದೀಪ್ ರಾವ್** |
| ಕೋಶಾಧಿಕಾರಿ | : | **ಶ್ರೀ ಬಿ. ಎಸ್. ಬಾಲಚಂದ್ರ ತೋಳ್ಪಾಡಿ** |

ಆನಂದ ಬಳಗದ ಕಾರ್ಯ ಚಟುವಟಿಕೆಗಳು ಸಾಂಗವಾಗಿ ನಡೆಯುವಲ್ಲಿ ವಿವಿಧ ಉಪ ವಿಭಾಗಗಳ ಪಾತ್ರ ಮತ್ತು ಶ್ರಮ ಗಮನಾರ್ಹ. 2020 – 2022 ಸಾಲಿನ ಎರಡು ವರ್ಷಗಳಿಗೆ ವಿವಿಧ ಉಪ ವಿಭಾಗಗಳಿಗೆ ನೇಮಕವಾದ ಸಂಚಾಲಕರ ವಿವರ ಈ ರೀತಿ ಇದೆ :

| | | | |
|---|---|---|---|
| 1. | ಸಾಂಸ್ಕೃತಿಕ ವಿಭಾಗ | : | **ಶ್ರೀಮತಿ ಶೋಭಾ ರಾಧಾಕೃಷ್ಣ** |
| 2. | ಧಾರ್ಮಿಕ ವಿಭಾಗ | : | **ಶ್ರೀ ಪಿ.ಎನ್. ವಿಷ್ಣುಮೂರ್ತಿ ಕುದ್ದಣ್ಣಾಯ** |
| 3. | ಯುವ ವಿಭಾಗ | : | **ಶ್ರೀ ಕೆ. ಗೋಪಾಲ ಕೃಷ್ಣ** |
| 4. | ವ್ಯಾಸಂಗ ಸಹಾಯ ಯೋಜನೆ | : | **ಶ್ರೀ ಎಸ್. ಎನ್. ಶರತ್‌ಚಂದ್ರ** |
| 5. | ಸಾರ್ವಜನಿಕ ಸಂಪರ್ಕ | : | **ಶ್ರೀ ವೈ. ಜಯಂತರಾವ್** |
| 6. | ಸದಸ್ಯರ ಅಭಿವೃದ್ಧಿ | : | **ಶ್ರೀ ಎಂ. ಕೃಷ್ಣಪ್ರಸಾದ್** |
| 7. | ಸಮುದಾಯ ಸೇವೆಗಳು | : | **ಡಾ. ಕೆ. ಎನ್. ಅಡಿಗ, ಅಡೂರು** |
| 8. | ಮಾಧ್ಯಮ ಮತ್ತು ಸಂವಹನ | : | **ಶ್ರೀ ಎಂ. ದಿನೇಶ್ ರಾವ್** |
| 9. | ಭೃಗುವಾಣಿ ಸಂಪಾದಕರು | : | **ಶ್ರೀ ಎಂ. ಸತ್ಯನಾರಾಯಣ ಭಟ್** |

ನೂತನ ಕಾರ್ಯಕಾರಿ ಸಮಿತಿಯು ಮುಂದಿನ ಎರಡು ವರ್ಷಗಳಲ್ಲಿ ಬಳಗವನ್ನು ಇನ್ನಷ್ಟು ಮುನ್ನಡೆಸಲಿ ಎಂದು ಎಲ್ಲರ ಹಾರೈಕೆ.

# ಬಳಗದ ನೂತನ ಅಧ್ಯಕ್ಷೆ ಶ್ರೀಮತಿ ವಿಜಯಲಕ್ಷ್ಮಿ ಭಟ್




ಆನಂದ ಬಳಗದ ಮುಂದಿನ ಎರಡು ವರ್ಷಗಳ ಅವಧಿಗೆ (2020–2022) ಅಧ್ಯಕ್ಷರಾಗಿ ಕಾರ್ಯಕಾರಿ ಸಮಿತಿಯಲ್ಲಿ ಸರ್ವಾನುಮತದಿಂದ ಆಯ್ಕೆಯಾಗಿರುವ ಶ್ರೀಮತಿ ವಿಜಯಲಕ್ಷ್ಮಿ ಭಟ್ ಎಸ್. ಬಳಗಕ್ಕೆ ಚಿರಪರಿಚಿತವಾದ ಹೆಸರು. ಬಳಗದ ಜೊತೆ ದೀರ್ಘ ಕಾಲದ ಒಡನಾಟವನ್ನು ಇರಿಸಿಕೊಂಡು, ಬಳಗದ ಅಭಿವೃದ್ಧಿಗೆ, ಮುನ್ನಡೆಗೆ ಮತ್ತು ಜನಪ್ರಿಯತೆಗೆ ಅಪಾರವಾದ ಕೊಡುಗೆ ನೀಡುತ್ತಾ ಬಂದಿರುವ ಶ್ರೀಮತಿ ವಿಜಯಲಕ್ಷ್ಮಿ ಭಟ್‌ರವರು ಯಾವುದೇ ಕೆಲಸವನ್ನು ಅತ್ಯಂತ ಶ್ರದ್ಧೆಯಿಂದ ಪರಿಪೂರ್ಣವಾಗಿ ಸಾಧಿಸುವ ಬದ್ಧತೆಯುಳ್ಳ ಅಪರೂಪದ ಕಾರ್ಯಕರ್ತೆ.

ಬಳಗದಲ್ಲಿ 2004–2006 ಅವಧಿಯಲ್ಲಿ ಉಪಾಧ್ಯಕ್ಷರಾಗಿ ಹಾಗೂ 2002–2004 ಮತ್ತು 2008–2010 ಅವಧಿಗಳಲ್ಲಿ ಕಾರ್ಯದರ್ಶಿಯಾಗಿ ಸಮರ್ಥ ಸೇವೆ ಸಲ್ಲಿಸಿರುವ ಶ್ರೀಮತಿ ಭಟ್‌ರವರು 2014–2016 ಅವಧಿಯಲ್ಲಿ ವಿವಿಧ ಉಪವಿಭಾಗಗಳ ಸಲಹೆಗಾರರಾಗಿ ಮಾರ್ಗದರ್ಶನ ನೀಡಿದ್ದಾರೆ. 2016–2020 ಈ ನಾಲ್ಕು ವರ್ಷಗಳ ಅವಧಿಯಲ್ಲಿ ಮತ್ತೊಮ್ಮೆ ಬಳಗದ ಉಪಾಧ್ಯಕ್ಷೆಯಾಗಿ ಬಳಗದ ಮುನ್ನಡೆಗೆ ಅನುಪಮ ಕೊಡುಗೆ ನೀಡಿರುತ್ತಾರೆ. ಬಳಗದ ಸ್ವಂತ ಕಟ್ಟಡ ಆನಂದ ಸಭಾಗೃಹ ನಿರ್ಮಾಣದ ಹಂತದಲ್ಲಿ ಆರ್ಥಿಕ ಕ್ರೋಢೀಕರಣಕ್ಕಾಗಿ ಇವರು ಪಟ್ಟ ಪರಿಶ್ರಮ ಮತ್ತು ತೋರಿದ ಕಾರ್ಯಕ್ಷಮತೆ ಎಲ್ಲರ ಮೆಚ್ಚುಗೆಯನ್ನು ಸಂಪಾದಿಸಿದೆ. ಬಳಗದ ಮಹಿಳಾ ವಿಭಾಗದ ಅತ್ಯಂತ ಕ್ರಿಯಾಶೀಲ ಸದಸ್ಯೆಯಾಗಿ ಇವರ ನೇತೃತ್ವದಲ್ಲಿ ಕಳೆದ ಹಲವು ವರ್ಷಗಳಿಂದ ನಡೆಯುತ್ತಿರುವ ವಧು–ವರಾನ್ವೇಷಣೆ ಕಾರ್ಯಕ್ರಮ ಬಹಳಷ್ಟು ಯಶಸ್ವಿ ಎನ್ನಿಸಿಕೊಂಡಿದೆ.

ನಮ್ಮೂರಿನ ಕಾರ್ಕಳದಿಂದ ಬೆಂಗಳೂರಿಗೆ ಬಂದು, ನಗರದಲ್ಲಿ ದೀರ್ಘಕಾಲದಿಂದ ನೆಲೆಸಿರುವ ಶ್ರೀಮತಿ ವಿಜಯಲಕ್ಷ್ಮಿ ಬಳಗ ಮಾತ್ರವಲ್ಲದೆ ಇನ್ನೂ ಅನೇಕ ಸಂಘ–ಸಂಸ್ಥೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುತ್ತಾರೆ. ತಾಳೆಗರಿಯಲ್ಲಿ ಅತ್ಯಾಕರ್ಷಕವಾಗಿ ಚಿತ್ತಾರವನ್ನು ರಚಿಸುವ ಜಾನುರಿ ಕುಶಲಕಲೆಯಲ್ಲಿ ನಿಷ್ಣಾತರಾಗಿರುವ ಶ್ರೀಮತಿ ಭಟ್, ಯಾವುದೇ ಸಮಾರಂಭಕ್ಕೆ ಒಪ್ಪುವಂತಹ ವಿಶೇಷ ವಿನ್ಯಾಸದ ಜಾನುರಿಯನ್ನು ತಯಾರಿಸಿ, ಉಚಿತವಾಗಿ ನೀಡುವ ದೊಡ್ಡ ಮನಸ್ಸಿನವರು.

ಇವರ ಪತಿ ಶ್ರೀ ವೈ. ಶ್ರೀಪತಿ ಭಟ್ ವಿಡಿಯಾ (ಈಗಿನ ಕೆನ್ನಾ ಮೆಟಲ್) ಸಂಸ್ಥೆಯಲ್ಲಿ ಉನ್ನತ ಹುದ್ದೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದು, ಆನಂದ ಬಳಗದ ಆಗು–ಹೋಗುಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದಾರೆ.

ಸದಾ ನಗುಮುಖದ, ಮೃದು ಮನಸ್ಸಿನ ಆದರೆ ಅಷ್ಟೇ ಕಾರ್ಯನಿಷ್ಠುರತೆ ಮತ್ತು ಯೋಜನಾ ನಿಖರತೆಗೆ ಹೆಸರುವಾಸಿಯಾಗಿರುವ ಶ್ರೀಮತಿ ವಿಜಯಲಕ್ಷ್ಮಿ ಭಟ್‌ರವರ ನೇತೃತ್ವದಲ್ಲಿ ಆನಂದ ಬಳಗ ಮತ್ತಷ್ಟು, ಮಗದಷ್ಟು ಮುನ್ನಡೆಯಲಿ, ಅಭ್ಯುದಯದ ಪಥದಲ್ಲಿ ಸಾಗಿ, ಸದಸ್ಯರಿಗೆ ಇನ್ನಷ್ಟು ಹತ್ತಿರವಾಗಿ, ಜನಪ್ರಿಯತೆಯ ಉತ್ತುಂಗಕ್ಕೆ ಏರಲಿ ಎಂದು ಎಲ್ಲರ ಸದಾಶಯ.

---

**ಒಂದು ಮರದಿಂದ ಒಂದು ಲಕ್ಷ ಬೆಂಕಿ ಕಡ್ಡಿಯನ್ನು ತಯಾರಿಸಬಹುದು. ಆದರೆ ಒಂದು ಬೆಂಕಿಕಡ್ಡಿ ಒಂದು ಲಕ್ಷ ಮರವನ್ನು ಸುಡಬಹುದು.**

**ನೀತಿ : ಋಣಾತ್ಮಕ ಚಿಂತನೆ ಎಲ್ಲ ಧನಾತ್ಮಕ ಚಿಂತನೆಯನ್ನೂ ನಾಶ ಮಾಡಬಹುದು**

# ಆನಂದ ಬಳಗದ 32ನೇ ವಾರ್ಷಿಕೋತ್ಸವ



ಸಮಾರಂಭದ ಉದ್ಘಾಟನೆ

ಆನಂದ ಬಳಗದ 32ನೇ ವಾರ್ಷಿಕೋತ್ಸವವು ದಿ. 1.3.2020ರ ಭಾನುವಾರ ಹೋಟೆಲ್ ಉಡ್‌ಲ್ಯಾಂಡ್‌ನ ಶ್ರೀ ಕೃಷ್ಣ ಸಭಾಂಗಣದಲ್ಲಿ ಸಂಭ್ರಮದಿಂದ ಜರುಗಿತ್ತು. ಅಂದು ಅಪರಾಹ್ನ ಸುಮಾರು 3 ಗಂಟೆಗೆ ಯುವ ವಿಭಾಗವು ಸಂಯೋಜಿಸಿದ ''ಪರಸ್ಪರ - 2020'' ಪ್ರದರ್ಶನ - ಪರಿಚಯ ಕಾರ್ಯಕ್ರಮಕ್ಕೆ ಬಳಗದ ಅಧ್ಯಕ್ಷರಾದ ಶ್ರೀಮತಿ ಗೀತಾ ವಾಸುದೇವರಾವ್ ರವರು, ಇತರ ಗಣ್ಯರ ಸಮ್ಮುಖದಲ್ಲಿ ಚಾಲನೆಯನ್ನು ನೀಡಿದರು. ಯುವ ವಿಭಾಗದ ಸಂಚಾಲಕರಾದ ಶ್ರೀ ಎಂ.ಕೃಷ್ಣ ಪ್ರಸಾದ್‌ರವರ ನೇತೃತ್ವದಲ್ಲಿ ಸಂಯೋಜಿಸಲಾದ ಈ ಪರಸ್ಪರ - ಪ್ರದರ್ಶನದಲ್ಲಿ ಹದಿನಾಲ್ಕು ಮಳಿಗೆಗಳಿದ್ದು, ಇವುಗಳು ನಮ್ಮ ಸದಸ್ಯರು ಉತ್ಪಾದಿಸುತ್ತಿರುವ ಉತ್ಪನ್ನಗಳು ಹಾಗೂ ನೀಡುತ್ತಿರುವ ಸೇವೆಗಳನ್ನು ಸದಸ್ಯರಿಗೆ ಪರಿಚಯಿಸುವಲ್ಲಿ ಸಹಕಾರಿಯಾಯಿತು.

ವಾರ್ಷಿಕೋತ್ಸವದ ಸಭಾ ಕಾರ್ಯಕ್ರಮದ ಮೊದಲಿಗೆ ಝೀ- ಕನ್ನಡ ಟಿವಿ ವಾಹಿನಿಯ ಸರಿಗಮಪ ಸೀಸನ್ - 15ರ ವಿಜೇತರಾದ ಶ್ರೀ ಕೀರ್ತನ್ ಹೊಳ್ಳ ಮತ್ತು ವೃಂದದವರಿಂದ ಸುಮಾರು 2 ಗಂಟೆಗಳ ಕಾಲ ಭಕ್ತಿ ಸಂಗೀತ ಕಾರ್ಯಕ್ರಮ ನಡೆಯಿತು. ಗಜವದನ ಬೇಡುವೆ ಎಂಬ ಪ್ರಾರ್ಥನಾ ಗೀತೆಯೊಂದಿಗೆ ಆರಂಭವಾದ ಭಕ್ತಿ ಸಂಗೀತ ಭಾಗ್ಯದ ಲಕ್ಷ್ಮಿ ಬಾರಮ್ಮ ಎಂಬ ಮಂಗಳಗೀತೆಯೊಂದಿಗೆ ಮುಕ್ತಾಯವಾಗಿ, ಸಭಿಕರ ಮನರಂಜಿಸಿತು.ತಬಲಾದಲ್ಲಿ ವಿದ್ವಾನ್ ಕೌಶಿಕ್ ಜಿ. ಭಟ್ ಮತ್ತು ಹಾರ್ಮೋನಿಯಂನಲ್ಲಿ ಶ್ರೀಮತಿ ನೀತಾ ಬೆಳಿಯೂರು ರವರು ಸಹಕರಿಸಿ, ಕಲಾ ರಸಿಕರ ಮೆಚ್ಚುಗೆ ಪಡೆದರು. ಸಭಾಕಾರ್ಯಕ್ರಮವು ಶ್ರೀಮತಿ ವಿಂದ್ಯಾ ಸುಭಾಷ್‌ರವರ ಪ್ರಾರ್ಥನೆಯೊಂದಿಗೆ ಆರಂಭವಾಯಿತು. ವೇದಿಕೆಯಲ್ಲಿದ್ದ ಗಣ್ಯರನ್ನು ಮತ್ತು ಸದಸ್ಯರನ್ನು ಬಳಗದ ಉಪಾಧ್ಯಕ್ಷರಾದ ಶ್ರೀ ಬಿ.ರಾಮಚಂದ್ರ ಉಪಾಧ್ಯರವರು ಸ್ವಾಗತಿಸಿದರು. ಬಳಗದ ಅಧ್ಯಕ್ಷರಾದ ಶ್ರೀಮತಿ ಗೀತಾ ವಾಸುದೇವ ರಾವ್‌ರವರು ಮುಖ್ಯ ಅತಿಥಿಗಳ ಜೊತೆಗೂಡಿ, ಜ್ಯೋತಿಯನ್ನು ಬೆಳಗುವುದರ ಮೂಲಕ ಸಮಾರಂಭಕ್ಕೆ ಚಾಲನೆ ನೀಡಿದರು. 2019-20ನೇ ಸಾಲಿನ ವಾರ್ಷಿಕ ವರದಿಯನ್ನು ಕಾರ್ಯದರ್ಶಿಯವರಾದ ಶ್ರೀ ಎಸ್. ಹರಿದಾಸ ಉಪಾಧ್ಯರವರು ಸಂಕ್ಷಿಪ್ತವಾಗಿ ಸಭೆಯ ಮುಂದಿಟ್ಟರು.

ಪ್ರತಿ ವರ್ಷವೂ ವಾರ್ಷಿಕೋತ್ಸವದ ಸಂದರ್ಭದಲ್ಲಿ ನಮ್ಮ ಸಮಾಜದಲ್ಲಿ ವಿಶೇಷ ಸಾಧನೆ ಮಾಡಿದ ಸಾಧಕರನ್ನು ಗುರುತಿಸಿ, ಅವರಿಗೆ ''ಆನಂದ ಸಮಾಜ ಭೂಷಣ'' ಪ್ರಶಸ್ತಿ ನೀಡಿ ಸನ್ಮಾನಿಸುವ ಸತ್ಸಂಪ್ರದಾಯವನ್ನು ಬಳಗವು ಕಳೆದ ಕೆಲವು ವರ್ಷಗಳಿಂದ ಪಾಲಿಸುತ್ತಾ ಬಂದಿದೆ. ಈ ವಾರ್ಷಿಕೋತ್ಸವದಲ್ಲಿ ಖ್ಯಾತ ಗಂಜೀಫಾ ಕಲಾವಿದ ಶ್ರೀ ಗಂಜೀಫಾ ರಘುಪತಿ ಭಟ್ ಮತ್ತು ಜನಪ್ರಿಯ ಯೋಗ ಗುರು ಮತ್ತು ಸಮಾಜ ಹಿತಚಿಂತಕರಾದ ಶ್ರೀ ಪಿ.ಸಿ. ಮುಕುಂದರಾವ್‌ರವರು ''ಆನಂದ ಸಮಾಜ ಭೂಷಣ'' ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು.



ಪರಸ್ಪರ – 2020ಕ್ಕೆ ಚಾಲನೆ !

ಶ್ರೀ ರಘುಪತಿ ಭಟ್‌ರವರ ಪರಿಚಯವನ್ನು ಅವರ ಸನ್ಮಾನ ಪತ್ರವನ್ನು ವಾಚಿಸುವ ಮೂಲಕ ಮಹಿಳಾ ವಿಭಾಗದ ಅಧ್ಯಕ್ಷೆ ಶ್ರೀಮತಿ ರತ್ನಕಲಾ ಮಡಿಯವರು ಮಾಡಿದರೆ, ಶ್ರೀ

ಪಿ.ಸಿ. ಮುಕುಂದರಾಯರ ಪರಿಚಯವನ್ನು ಮಾಧ್ಯಮ ಮತ್ತು ಸಂವಹನ ವಿಭಾಗದ ಸಂಚಾಲಕರಾದ ಶ್ರೀ ಎಂ. ದಿನೇಶ್‌ರಾವ್‌ರವರು ಮಾಡಿದರು. ಸಮಾರಂಭಕ್ಕೆ ಪ್ರಧಾನ ಅತಿಥಿಗಳಾಗಿ ಆಗಮಿಸಿದ್ದ ಬೆಂಗಳೂರು ದಕ್ಷಿಣ ಕ್ಷೇತ್ರದ ಮಾನ್ಯ ಲೋಕ ಸಭಾ ಸದಸ್ಯರಾದ ಶ್ರೀ ತೇಜಸ್ವಿ ಸೂರ್ಯರವರು ವೇದಿಕೆಯಲ್ಲಿದ್ದ ಗಣ್ಯರ ಸಮ್ಮುಖದಲ್ಲಿ ಶ್ರೀ ರಘುಪತಿ ಭಟ್ ಮತ್ತು ಶ್ರೀ ಪಿ.ಸಿ. ಮುಕುಂದ ರಾವ್‌ರವರಿಗೆ ''ಆನಂದ ಸಮಾಜ ಭಾಷಣ'' ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಿದರು. ಸನ್ಮಾನಕ್ಕೆ ಪ್ರತಿಕ್ರಿಯೆಯಾಗಿ ಮಾತನಾಡಿದ ಶ್ರೀ ರಘುಪತಿ ಭಟ್‌ರವರು ಬಹಳ ಅಪರೂಪವಾದ ಗಂಜೀಫಾ ಕಲೆಯ ಬಗ್ಗೆ ಅನೇಕ ಮಾಹಿತಿಗಳನ್ನು ನೀಡಿ, ಈ ಕಲೆಯನ್ನು ಉಳಿಸಿ, ಬೆಳೆಸುವಲ್ಲಿ ತಾವು ಮಾಡುತ್ತಿರುವ ಸೇವೆಗೆ ಸದಾ ಪ್ರೋತ್ಸಾಹ ಮತ್ತು ಬೆಂಬಲ ನೀಡುತ್ತಿರುವ ಈ ಬಳಗ ಸದಸ್ಯರಿಗೆಲ್ಲ ಆನಂದ ನೀಡುತ್ತಿರುವುದು ಶ್ಲಾಘನೀಯ. ಎಲ್ಲ ವಯಸ್ಸಿನ ಸದಸ್ಯರನ್ನು ಗಮನದಲ್ಲಿಟ್ಟುಕೊಂಡು, ಕಾರ್ಯಚಟುವಟಿಕೆಗಳನ್ನು ರೂಪಿಸುತ್ತಿರುವ ಬಳಗದ ಬಗ್ಗೆ ಹಾಗೂ ದಕ್ಷಿಣ ಕನ್ನಡದ ಜನರ ಬಗ್ಗೆ ಮೆಚ್ಚುಗೆಯ ಮಾತನಾಡಿದ ಶ್ರೀ ತೇಜಸ್ವಿ ಸೂರ್ಯರವರು ಬಳಗಕ್ಕೆ ಶುಭ ಹಾರೈಸಿದರು. ಮಾನ್ಯ ಲೋಕ ಸಭಾ ಸದಸ್ಯರನ್ನು ಬಳಗದ ಪರವಾಗಿ ಅಧ್ಯಕ್ಷರು ಗೌರವಿಸಿದರು.

ವಾರ್ಷಿಕೋತ್ಸವದ ಸಂದರ್ಭದಲ್ಲಿ ಬಳಗದ ವ್ಯಾಸಂಗ ಸಹಾಯ ನಿಧಿಗೆ ಉದಾರವಾಗಿ ದೇಣಿಗೆ ನೀಡಿದ ಉಡುಪಿಯ ಶ್ರೀ ಬಿ. ಆರ್. ನರಸಿಂಹರಾವ್ ಮತ್ತು ಶ್ರೀಮತಿ ಸಾವಿತ್ರಿ ರಾವ್ ರವರನ್ನು ವೇದಿಕೆಗೆ ಆಹ್ವಾನಿಸಿ





ಸಭಾಂಗಣದ ನೋಟ

ಎಲ್ಲರಿಗೂ ಕೃತಜ್ಞತೆ ಅರ್ಪಿಸಿದರು. ಶ್ರೀ ಪಿ.ಸಿ. ಮುಕುಂದ ರಾವ್‌ರವರು ಮಾತನಾಡಿ ಯೋಗವು ಭಾರತದಲ್ಲಿ ಸಾವಿರಾರು ವರ್ಷಗಳಿಂದ ಬಳಕೆಯಲ್ಲಿದ್ದು, ಇತ್ತೀಚೆಗೆ ಬಹಳಷ್ಟು ಪ್ರಾಮುಖ್ಯತೆಯನ್ನು ಪಡೆಯುತ್ತಿದೆ. ಸಮಾಜದ ಸ್ವಾಸ್ಥ್ಯಕ್ಕಾಗಿ ಮತ್ತು ಆರೋಗ್ಯದಿಂದ ಬದುಕುವುದಕ್ಕೆ ಯೋಗವು ಸಹಕಾರಿಯೆಂದು ಪ್ರತಿಪಾದಿಸಿದ ಶ್ರೀ ರಾವ್ ಬಳಗದ ಸದಸ್ಯರಲ್ಲಿ ಈ ಬಗ್ಗೆ ತಿಳುವಳಿಕೆ ಹೆಚ್ಚಾಗುತ್ತಿರುವುದು ತೃಪ್ತಿಯ ಸಂಗತಿ ಎಂದರು. ತಾವು ಸ್ಥಾಪಿಸಿದ ನೆಮ್ಮದಿ ಸಂಸ್ಥೆಯ ಬಗ್ಗೆ ಪ್ರಸ್ತಾಪಿಸಿದ ಶ್ರೀಯುತರು ಈ ಸಂಸ್ಥೆಯ ಬೆಳವಣಿಗೆಯಲ್ಲಿ ಕೈ ಜೋಡಿಸಿದ ಎಲ್ಲರನ್ನೂ ಸ್ಮರಿಸಿ, ಮುಂದೆಯೂ ನೆಮ್ಮದಿಯ ಕಾರ್ಯ ನಿರ್ವಹಣೆಗೆ ಸಮಾಜದ ಬೆಂಬಲ ಅತ್ಯಗತ್ಯ ಎಂದು ವಿವರಿಸಿದರು.

ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದ ಮಾನ್ಯ ತೇಜಸ್ವಿ ಸೂರ್ಯರವರು, ಆನಂದ ಬಳಗದ ಹೆಸರೇ ಸೂಚಿಸುವಂತೆ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಪ್ರತಿಕ್ರಿಯೆ ನೀಡಿದ ಶ್ರೀ ನರಸಿಂಹ ರಾವ್ ಕೆರೆಯ ನೀರನ್ನು ಕೆರೆಗೆ ಚೆಲ್ಲಿದಂತೆ, ದೇವರು ಕೊಟ್ಟ ಸಂಪತ್ತಿನ ತುಸುಭಾಗವನ್ನಾದರೂ ಮತ್ತೆ ಸಮಾಜಕ್ಕೆ ನೀಡುವುದು ಎಲ್ಲರ ಕರ್ತವ್ಯ ಮತ್ತು ಜೀವನ ಧರ್ಮವಾಗಬೇಕು ಎಂದು ಹೇಳಿ ತಾವು ನೀಡಿರುವುದು ಅತ್ಯಲ್ಪ; ಬಳಗಕ್ಕೆ ತನ್ನ ಕೈಲಾದಷ್ಟು ಸೇವೆ ಸಲ್ಲಿಸುವ ಸದವಕಾಶ ಮುಂದಿನ ವರ್ಷಗಳಲ್ಲಿ ಮತ್ತಷ್ಟು ಬರಲಿ ಎಂದು ಆಶಿಸಿದರು.

ಬಳಗದ ಸಕ್ರಿಯ ಸದಸ್ಯ ದಂಪತಿಗಳಾದ ಶ್ರೀ ಜನಾರ್ದನ್ ಮತ್ತು ಶ್ರೀಮತಿ ಸುಶೀಲಾ ಜನಾರ್ದನ್‌ರವರು ಬಳಗದ ಸದಸ್ಯರಾದ ಶ್ರೀ ರಾಘವೇಂದ್ರ ರಾವ್ ರವರ ಅವಳಿ ಪುತ್ರಿಯರಾದ ಆರ್. ನಳಿನಾ ಮತ್ತು ಆರ್. ನಯನಾ ಎಂಬ ಪ್ರತಿಭಾವಂತ ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ 'ಲ್ಯಾಪ್ ಟಾಪ್'ನ್ನು ನೀಡಿ, ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು.





**ಪರಸ್ಪರ 2020 ಮಳಿಗೆಯಲ್ಲಿ ಆಸಕ್ತರ ವಿಚಾರಣೆ**

ಆನಂದ ಬಳಗದಲ್ಲಿ ಕಳೆದ ನಾಲ್ಕು ವರ್ಷಗಳಿಂದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿ, ಬಳಗವನ್ನು ಬಹಳಷ್ಟು ಮುನ್ನಡೆಸಿದ ಶ್ರೀಮತಿ ಗೀತಾ ವಾಸುದೇವ ರಾವ್ ರವರು ಅಧ್ಯಕ್ಷ ಸ್ಥಾನದಿಂದ ನಿರ್ಗಮಿಸುತ್ತಿದ್ದು ದಿನಾಂಕ 1.4.2020 ರಂದು ಪ್ರಾರಂಭ ವಾಗುವ 2020-22 ನೇ ಸಾಲಿಗೆ ಶ್ರೀಮತಿ ವಿಜಯಲಕ್ಷ್ಮಿ ಭಟ್‌ರವರು ಅಧ್ಯಕ್ಷರಾಗಿ ಆಯ್ಕೆಯಾಗಿದ್ದು, ನೂತನ ಅಧ್ಯಕ್ಷರಾದ ಶ್ರೀಮತಿ ವಿಜಯಲಕ್ಷ್ಮಿ ಭಟ್‌ರವರನ್ನು ಶ್ರೀಮತಿ ಗೀತಾ ವಾಸುದೇವರಾವ್‌ರವರು ಹೂಗುಚ್ಛ ನೀಡಿ ಅಭಿನಂದಿಸಿದರು. ಬಳಗದ ಅಧ್ಯಕ್ಷರಾಗಿ, ಬಳಗವನ್ನು ಅತ್ಯಂತ ದಕ್ಷತೆಯಿಂದ ಮುನ್ನಡೆಸಿಕೊಂಡು, ಬಳಗದ ಅಭ್ಯುಯದಕ್ಕೆ ಅಮೋಘವಾಗಿ ಶ್ರಮಿಸಿದ ಶ್ರೀಮತಿ ಗೀತಾ ವಾಸುದೇವರಾವ್ ರವರಿಗೆ ಹೂಗುಚ್ಛವನ್ನು ನೀಡುವುದರ ಮೂಲಕ ಬಳಗದ ಪರವಾಗಿ ಗೌರವದ ಕೃತಜ್ಞತೆಯನ್ನು ಸಲ್ಲಿಸಲಾಯಿತು. ಪ್ರತಿ ವರ್ಷದಂತೆ ವಾರ್ಷಿಕೋತ್ಸವಕ್ಕೆ ಸುಸಜ್ಜಿತ ಸಭಾಂಗಣ, ಉಪಾಹಾರ, ಭರ್ಜರಿ ಭೋಜನ ಮತ್ತಿತರ ವ್ಯವಸ್ಥೆಗಳನ್ನು ಉದಾರವಾಗಿ ನೀಡಿದ ಹೋಟೆಲ್ ಉಡ್‌ಲ್ಯಾಂಡ್ಸ್‌ನ ಮಾಲೀಕರಾದ ಶ್ರೀ ಕೆ. ವಾಸು ದೇವರಾವ್‌ರವರನ್ನು ವೇದಿಕೆಗೆ ಆಹ್ವಾನಿಸಿ, ಹೂಗುಚ್ಛ ನೀಡುವುದರ ಮೂಲಕ ಗೌರವಿಸಲಾಯಿತು.

ಸಮಾರಂಭದ ಅಧ್ಯಕ್ಷ ಭಾಷಣ ಮಾಡಿದ ಶ್ರೀಮತಿ ಗೀತಾ ವಾಸುದೇವ ರಾವ್‌ರವರು ಆನಂದ ಬಳಗದ ಅಧ್ಯಕ್ಷ ಸ್ಥಾನವನ್ನು ನಾಲ್ಕು ವರ್ಷಗಳ ಹಿಂದೆ ಬಹಳ ಹಿಂಜರಿಕೆಯಿಂದ ವಹಿಸಿಕೊಂಡರೂ, ದಿನ ಕಳೆದಂತೆ ಬಳಗದ ಅಧ್ಯಕ್ಷರಾಗಿ ಕರ್ತವ್ಯ ನಿರ್ವಹಿಸುವುದು ಬಹಳ ಸುಲಭ ಎಂದು ಗೊತ್ತಾಯಿತು. ಈರ್ವರು ಉಪಾಧ್ಯಕ್ಷರು, ಕಾರ್ಯದರ್ಶಿ, ಕೋಶಾಧಿಕಾರಿ, ವಿವಿಧ ಉಪವಿಭಾಗಗಳ ಸಂಚಾಲಕರು ಕಾರ್ಯಕಾರಿ ಸಮಿತಿಯ ಸದಸ್ಯರು ಹಾಗೂ ಬಳಗದ ಸರ್ವ ಸದಸ್ಯರ ಪೂರ್ಣ ಸಹಕಾರದಿಂದ ಕಳೆದ 4 ವರ್ಷ ಅವಧಿಯಲ್ಲಿ ಬಳಗವನ್ನು ಕೈಲಾದಷ್ಟು ಮಟ್ಟಿಗೆ ಮುನ್ನಡೆಸಲು ದೇವರು ನೀಡಿರುವ ಸದವಕಾಶಕ್ಕೆ ಸಂತಸ ವ್ಯಕ್ತ ಪಡಿಸಿದ ಶ್ರೀಮತಿ ಗೀತಾವಾಸುದೇವರಾವ್‌ರವರು ಮುಂದೆ ಶ್ರೀಮತಿ ವಿಜಯಲಕ್ಷ್ಮಿಯವರ ಸಾರಥ್ಯದಲ್ಲಿ ಬಳಗ ಮತ್ತಷ್ಟು ಮುಂದೆ ಸಾಗಲಿ ಎಂದು ಹಾರೈಸಿ, ತನ್ನ ಸಕಲ ರೀತಿಯ ಸಹಕಾರ ಇದ್ದೇ ಇದೆ ಎಂದು ಭರವಸೆ ನೀಡಿದರು.

ಕಾರ್ಯಕ್ರಮದ ಕೊನೆಯಲ್ಲಿ ಧಾರ್ಮಿಕ ವಿಭಾಗದ ಸಂಚಾಲಕರಾದ ಶ್ರೀ ವೈ.ಜಯಂತ್‌ರಾವ್‌ರವರು ಧನ್ಯವಾದ ಅರ್ಪಿಸಿದರು. ಭೃಗುವಾಣಿಯ ಸಂಪಾದಕರಾದ ಶ್ರೀ ಎಂ. ಸತ್ಯನಾರಾಯಣ ಭಟ್ ಕಾರ್ಯಕ್ರಮದ ನಿರೂಪಣೆ ಮಾಡಿದರು.

ಮಹಿಳಾ ವಿಭಾಗದವರು ಸಂಯೋಜಿಸಿದ್ದ ಲಕ್ಕಿಡಿಪ್‌ನ ಅದೃಷ್ಟ ಚೀಟಿಗಳನ್ನು ಬಳಗದ ಅಧ್ಯಕ್ಷರು ಮತ್ತು ಮಹಿಳಾ ವಿಭಾಗದ ಅಧಕ್ಷೆಯಾದ ಶ್ರೀಮತಿ ರತ್ನಕಲಾ ಮಡಿಯವರು ಆಯ್ದು, ಪ್ರಥಮ ದ್ವಿತೀಯ, ತೃತೀಯ ಹಾಗೂ ಸಮಾಧಾನಕರ ಬಹುಮಾನಗಳನ್ನು ಅದೃಷ್ಟವಂತರಿಗೆ ನೀಡಿದರು.

ಸಮಾರಂಭದ ನಂತರ ಹೋಟೆಲ್ ಉಡ್‌ಲ್ಯಾಂಡ್‌ನ ಸೌಜನ್ಯದಲ್ಲಿ ವ್ಯವಸ್ಥೆಯಾಗಿದ್ದ ಭರ್ಜರಿ ಭೋಜನವನ್ನು ಸದಸ್ಯರೆಲ್ಲರೂ ಸವಿದು, ಹೋಟೆಲ್ ಆವರಣದಿಂದ ನಿರ್ಗಮಿಸಿದರು.

# ಕೋವಿಡ್ ಸಂತ್ರಸ್ಥರಿಗೆ ಬಳಗದ ಕಿರು ಸಹಾಯ

ಮಹಾಮಾರಿ ಕೋವಿಡ್-19 ಪ್ರಭಾವದಿಂದ ತೊಂದರೆಗೀಡಾದವರಿಗೆ ತುಸು ಮಟ್ಟಿಗಾದರೂ ಕೈಲಾದಷ್ಟು ನೆರವು ನೀಡಿ, ಅವರಿಗೆ ಸಾಂತ್ವನ ಹೇಳುವ ಕೆಲಸವನ್ನು ಆನಂದ ಬಳಗ ತನ್ನ ಆದ್ಯ ಕರ್ತವ್ಯ ಎಂಬ ದೃಷ್ಟಿಯಲ್ಲಿ ಮಾಡುತ್ತಿದೆ. ಬಳಗದ ಹೊಸ ಕಾರ್ಯಕಾರಿ ಸಮಿತಿಯ ತುರ್ತು ನಿರ್ಧಾರದಂತೆ ಬೆಂಗಳೂರು ನಗರದಲ್ಲಿ ಅತ್ಯಂತ ಕಠಿಣ ಪರಿಸ್ಥಿತಿಯನ್ನು ಎದುರಿಸುತ್ತಿರುವ ಅನೇಕ ಕುಟುಂಬಗಳನ್ನು ಗುರುತಿಸಿ, ಅವರಿಗೆ ಜೀವನಾವಶ್ಯಕ ದಿನಸಿ ವಸ್ತುಗಳನ್ನು ನೀಡುವುದಲ್ಲದೆ, ಅತ್ಯಗತ್ಯ ಸಂದರ್ಭದಲ್ಲಿ ನಗದು ರೂಪದಲ್ಲಿಯೂ ಸಹಾಯ ಮಾಡಲಾಗಿದೆ. ಬಳಗದ ಕಾರ್ಯಕಾರಿ ಸಮಿತಿಯ ಸದಸ್ಯರು ಹಾಗೂ ಇನ್ನಿತರ ಉದಾರಿ ಸದಸ್ಯರ ದೇಣಿಗೆಯಿಂದ ಈ ಕಾರ್ಯ ಸಾಧ್ಯವಾಗಿದ್ದು, ಈ ಸತ್ಕಾರ್ಯದಲ್ಲಿ ಕೈ ಜೋಡಿಸಿದ ಎಲ್ಲಾ ಸದಸ್ಯರಿಗೂ ಕೃತಜ್ಞತೆಗಳು.

ಕೋವಿಡ್ ಹಾವಳಿ ಆರಂಭವಾದಾಗಿನಿಂದ ಅನೇಕ ಸಂಘ-ಸಂಸ್ಥೆಗಳು ಅಗತ್ಯವುಳ್ಳ ಬಡ ಕುಟುಂಬಗಳಿಗೆ ವಿವಿಧ ರೀತಿಯ ನೆರವನ್ನು ನೀಡುತ್ತಿದ್ದು, ಬಳಗವು ಈ ಸಂಸ್ಥೆಗಳ ಜೊತೆಗೂಡಿ ಸಹಾಯಹಸ್ತ ನೀಡುತ್ತಿದೆ. ಬಳಗದ ಕಾರ್ಯದರ್ಶಿಯಾಗಿರುವ ಶ್ರೀ ಎಂ.ಕೆ. ಗುರುಮೂರ್ತಿ ಯವರು ರಾಷ್ಟ್ರೀಯ ಸ್ವಯಂ ಸೇವಕ ಸಂಘ ಹಾಗೂ ಇನ್ನಿತರ ಸಂಸ್ಥೆಗಳೊಡನೆ ನಿಕಟ ಸಂಪರ್ಕವಿಟ್ಟುಕೊಂಡು, ಸುಮಾರು 3000 ಕುಟುಂಬಗಳಿಗೆ ದಿನಸಿ ಕಿಟ್‌ಗಳನ್ನು ವಿತರಣೆ ಮಾಡುವಲ್ಲಿ ತನ್ನ ಪಾಲಿನ ಸೇವೆಯನ್ನು ನೀಡಿದ್ದಾರೆ. ಅವರು ಮಾತ್ರವಲ್ಲದೆ ಬಳಗದ ಅನೇಕ ಸದಸ್ಯರು ಪ್ರಧಾನ ಮಂತ್ರಿಗಳ ಪರಿಹಾರ ನಿಧಿಗೆ ಮತ್ತು ರಾಜ್ಯದ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ಉದಾರ ದೇಣಿಗೆಯನ್ನು ನೀಡಿದ್ದಲ್ಲದೆ, ಅನೇಕ ಕುಟುಂಬಗಳಿಗೆ ವೈಯಕ್ತಿಕ ನೆಲೆಯಲ್ಲಿ ನೆರವು ನೀಡಿದ್ದಾರೆ. ಆನಂದ ಬಳಗವು ಈ ಹಿಂದಿನಂತೆ ಸಮಾಜ ಸಂಕಷ್ಟದಲ್ಲಿದ್ದಾಗ, ಅದಕ್ಕೆ ಸೂಕ್ತ ರೀತಿಯಲ್ಲಿ ಸ್ಪಂದಿಸಿ, ಜನತಾ ಸೇವೆಯನ್ನು ಮಾಡುವುದರ ಮೂಲಕ ಜನಾರ್ದನನ ಸೇವೆಯನ್ನು ಮಾಡುವುದರಲ್ಲಿ ತನ್ನ ಬದ್ಧತೆಯನ್ನು ತೋರಿಸಿದೆ. ಎಲ್ಲರಿಗೂ ಭಗವಂತ ಹರಸಲಿ... ಮುಂದೆಯೂ ಇಂತಹ ಸತ್ಕಾರ್ಯ ಮಾಡುವ ಶಕ್ತಿ ಮತ್ತು ಹೃದಯವಂತಿಕೆಯನ್ನು ನೀಡಲಿ.

## ದಯವಿಟ್ಟು ಗಮನಿಸಿ !

**ಜಗತ್ತಿನಾದ್ಯಂತ ವ್ಯಾಪಿಸಿರುವ ಕೋವಿಡ್-19ನ ಕಠಿಣ ಪರಿಣಾಮದಿಂದಾಗಿ ಆನಂದ ಬಳಗವು ಪ್ರತಿ ವರ್ಷವೂ ನಡೆಸುತ್ತಾ ಬಂದಿರುವ ವಸಂತೋತ್ಸವ, ಮಕ್ಕಳ ಪ್ರತಿಭಾ ಸ್ಪರ್ಧೆ, ಮಕ್ಕಳ ಪ್ರತಿಭಾ ಮೇಳವನ್ನು ಸಂಯೋಜಿಸಲು ಅಸಾಧ್ಯವಾಗುತ್ತಿದೆ. ಶ್ರೀ ದುರ್ಗಾ ನಮಸ್ಕಾರ ಮತ್ತು ಶ್ರೀಗಣೇಶೋತ್ಸವ ಆಚರಣೆಯ ಬಗ್ಗೆ ಸಮಯ - ಸಂದರ್ಭಕ್ಕೆ ಅನುಗುಣವಾಗಿ ಸೂಕ್ತ ಸಮಯದಲ್ಲಿ ನಿರ್ಧಾರ ತೆಗೆದುಕೊಂಡು ಸದಸ್ಯರಿಗೆ ತಿಳಿಸಲಾಗುವುದು. ಈ ಅನಿವಾರ್ಯ ಸ್ಥಿತಿಯನ್ನು ಮನಗಂಡು ನಮ್ಮ ಜೊತೆ ಸಹಕರಿಸಬೇಕಾಗಿ ವಿನಂತಿ.**

– ಎಂ.ಕೆ. ಗುರುಮೂರ್ತಿ, ಕಾರ್ಯದರ್ಶಿ

## ಸದಸ್ಯರ ಗಮನಕ್ಕೆ

ಬಳಗದ ತ್ರೈಮಾಸಿಕ ಪತ್ರಿಕೆ ಸುಮಾರು 3 ದಶಕಗಳಿಂದ ಸರಾಗವಾಗಿ ಪ್ರಕಟವಾಗುತ್ತಿರುವುದು ತಮಗೆ ತಿಳಿದೇ ಇದೆ. ವರ್ಷಕ್ಕೆ ನಾಲ್ಕು ಸಂಚಿಕೆಗಳು ಸಕಾಲದಲ್ಲಿ ಅಥವಾ ಕೆಲ ಅನಿವಾರ್ಯ ಸಂದರ್ಭಗಳಲ್ಲಿ ತುಸು ತಡವಾಗಿ ತಮ್ಮ ಕೈಸೇರುತ್ತಿತ್ತು. ಆದರೆ ವಿಶ್ವವನ್ನೇ ಆವರಿಸಿದ ಕೋವಿಡ್-19ನ ಪರಿಣಾಮವಾಗಿ ಭೃಗುವಾಣಿಯ ಜನವರಿ-ಮಾರ್ಚ್ 2020 ಸಂಚಿಕೆಯನ್ನು ಹೊರತರಲಾಗಲಿಲ್ಲ. ಮುದ್ರಣಾಲಯ ತನ್ನ ಕಾರ್ಯವನ್ನು ಸ್ಥಗಿತಗೊಳಿಸಿರುವುದು ಹಾಗೂ ಅಂಚೆ ಕಚೇರಿ ದಿನನಿತ್ಯದ ಬಟವಾಡೆಯನ್ನು ಮಾಡದೆ ಇರುವ ಕಾರಣ 2018-2020 ಅವಧಿಯ ಕೊನೆಯ ಸಂಚಿಕೆಯನ್ನು ಪ್ರಕಟಿಸುವ ಪ್ರಯತ್ನವನ್ನು ಕೈಬಿಡಲಾಯಿತು. 2020-2022 ಅವಧಿಯ ಪ್ರಥಮ ಸಂಚಿಕೆ ತಮ್ಮ ಕೈಸೇರಿದೆ. ಸದಸ್ಯ ಬಾಂಧವರು ಅನಿವಾರ್ಯ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳುತ್ತಾರೆ ಎಂಬ ವಿಶ್ವಾಸ ನಮಗಿದೆ.

– ಸಂಪಾದಕ ಮಂಡಳಿ

# ಸಂಭ್ರಮದ ಆನಂದ ಮಿಲನ – 2020

ವರದಿ : ಗೀತಾ ಪಿ. ಆರ್. ರಾವ್




ಚಿಣ್ಣರ ಫ್ಯಾಷನ್ ಶೋ

2020ರ ಆರಂಭವನ್ನು ಉತ್ಸಾಹದಿಂದ ಬರಮಾಡಿ ಕೊಂಡದ್ದು ಯುವ ವಿಭಾಗದವರು ದಿನಾಂಕ 12.1.2020 ರಂದು ಏರ್ಪಡಿಸಿದ ''ಆನಂದ ಮಿಲನ''ದ ಮೂಲಕ. ಬಹಳ ದಿನಗಳಿಂದ ಸದಸ್ಯರು ಕಾಯುತ್ತಿದ್ದ ಕಾರ್ಯಕ್ರಮವಿದು. ಬಹಳ ಉತ್ಸಾಹದಿಂದ ಸದ್ಯರು ಅಧಿಕ ಸಂಖ್ಯೆಗಳಲ್ಲಿ ಸೇರಿದ್ದರು.

ಕಾರ್ಯಕ್ರಮ ''ಆಹಾರ ಮೇಳ''ದಿಂದ. ಬಳಗದ ಅಧ್ಯಕ್ಷೆಯವರಾದ ಶ್ರೀಮತಿ ಗೀತಾ ವಾಸುದೇವರಾವ್ ರವರಿಂದ ಸಂಜೆ 4.15ಕ್ಕೆ ಪ್ರಾರಂಭವಾಯಿತು. ಆಹಾರ ಮಳಿಗೆಗಳ ಮುಂದೆ ಸದಸ್ಯರ ಗುಂಪುಗಳು ನೆರೆದಿತ್ತು. ಕಡುಬು, ಪತ್ರೊಡೆ, ಶ್ಯಾವಿಗೆ, ಚಾಟ್ಸ್, ಅವಲಕ್ಕಿ ಉಪ್ಪುಕರಿ, ಗೋಳಿ ಬಜೆ, ವಿವಿಧ ಬಜ್ಜಿಗಳು. ಮದ್ದೂರು ಒಡೆ, ಕಾಫಿ, ಟೀ, ಹಣ್ಣುಗಳು, ಕೇಕ್, ಹೊಸ ಆವಿಷ್ಕಾರ ಕೇಕ್ ಲಡ್ಡು. ಇನ್ನೂ ಅನೇಕ ತಿನಿಸುಗಳು ಲಭ್ಯವಿದ್ದವು.

ಸಭಾಕಾರ್ಯಕ್ರಮ 5 ಗಂಟೆಗೆ ಶ್ರೀಮತಿ ಮಾಲಿನಿ ಹಾಗೂ ಶ್ರೀಮತಿ ಶೋಭಾರವರಿಂದ ಕರುಣಾಳು ಬಾ ಬೆಳಕೆ ಎಂಬ ಅದ್ಭುತ ಗೀತೆಯೊಂದಿಗೆ ಪ್ರಾರಂಭವಾಯಿತು. ತುಳುನಾಡು ಕಂಡ ಹೆಮ್ಮೆಯ ಯತಿವರ್ಯ ಪೇಜಾವರ ಮಠದ ವಿಶ್ವೇಶತೀರ್ಥರ ಬಗ್ಗೆ ಶ್ರೀ ಹರಿದಾಸ ಉಪಾಧ್ಯ ಎರಡು ಮಾತು. ಅಧ್ಯಕ್ಷೆಯವರಾದ ಗೀತಾವಾಸುದೇವರಾವ್ ರವರಿಂದ ಎರಡು ಮಾತು. ಹೊಸ ವರ್ಷ ಎಲ್ಲರಿಗೂ ಒಳ್ಳೆಯದಾಗಲಿ. ಎಲ್ಲರೂ ಒಗ್ಗಟ್ಟಿನಿಂದ ಮುನ್ನಡೆಸಿಕೊಂಡು ಬಳಗ ಏಳಿಗೆಗೆ ಶ್ರಮಿಸಬೇಕೆಂದು ಹಿತವಚನಗಳನ್ನು ನುಡಿದರು. ಯುವ ವಿಭಾಗದ ಸಂಚಾಲಕರಾದ ಶ್ರೀ ಕೃಷ್ಣ ಪ್ರಸಾದ್ ರವರು ತಮ್ಮ ಎರಡು ವರ್ಷದ ಸಾಧನೆಗಳನ್ನು ಸಭೆಯ ಮುಂದಿಟ್ಟರು. ನಂತರ ಮುಂಬಯಿಯವರಾದ ಶ್ರೀಮಾನ್ ಪಿ.ಎಲ್. ರಾವ್‌ರವರ ''ಎ. ಪಿಲಿಗ್ರಿಮೇಜ್ ಟು ನೋ ವೇರ್'' ಎಂಬ ಪುಸ್ತಕವನ್ನು ಅಧ್ಯಕ್ಷೆಯವರು ಬಿಡುಗಡೆ ಮಾಡಿದರು. ನಂತರ ಪಿ.ಎಲ್. ರಾವ್‌ರವರು ಪುಸ್ತಕದ ಬಗ್ಗೆ ಎರಡು ಮಾತು ನುಡಿದರು.




ಸದಸ್ಯರೆಲ್ಲಾ ಕಾಯುತ್ತಿದ್ದ ಮನರಂಜನಾ ಕಾರ್ಯಕ್ರಮವು ಮಕ್ಕಳ ವಸ್ತ್ರವಿನ್ಯಾಸ (ಫ್ಯಾಷನ್ ಷೋ) ಸುಮಾರು 20 ಮಕ್ಕಳಿಂದ ಸೊಗಸಾದ ಪ್ರದರ್ಶನ, ಯಾರೂ ಯಾರಿಗೇನು ಕಡಿಮೆ ಇಲ್ಲ ಎಂಬಂತೆ ಬಿನ್ನಾಣದಿಂದ, ವೈಯ್ಯಾರದಿಂದ ಬೆಕ್ಕಿನ ಹೆಜ್ಜೆ ಇಟ್ಟ ಮಕ್ಕಳ ಈ ನಡೆ ಎಲ್ಲರಿಂದ ಪ್ರಶಂಸನೀಯ. ಚತುರ ನಿರ್ದೇಶಕರ ಕೈಗೆ ಸಿಕ್ಕ ಚುರುಕು ಮಕ್ಕಳಿಂದ ಒಳ್ಳೆಯ ಪ್ರದರ್ಶನ.

ಮೈಕಲ್ ಜಾಕ್‌ಸನ್ ಅಪರಾವತಾರನಾದ ನಿಶ್ಚಿತ್ ತೋಳ್ಪಾಡಿಯ ಅದ್ಭುತ ನರ್ತನ, ಸಹ ನರ್ತಕರೊಂದಿಗೆ ಜೋಷ್ ನೃತ್ಯ. ಸ್ಟಾರ್ ಬಾಯ್ಸ್‌ಗೆ ನೆನಪಿನ ಕಾಣಿಕೆ ವಿತರಣೆ.

ಮಕ್ಕಳಿಂದ ಆಟ, ಬಾಲ್ ಆಡುವ ಪಂದ್ಯ. ನಂತರ ಬಳಗದ ಯುವಕರಿಂದ ಅದ್ಭುತ ನರ್ತನ, ಯುವಕರ ಸರಿಸಮವಾಗಿ ಪುರುಷರ ನೃತ್ಯ, ಸಿನಿಮಾ ಹಾಡಿನ ತುಣುಕುಗಳೊಂದಿಗೆ ನೃತ್ಯ ಸೊಗಸಾಗಿತ್ತು.

ದಂಪತಿಗಳಿಂದ ಸ್ಪರ್ಧೆ, ಚೀಟಿ ತೆಗೆದು ಅಭಿನಯ, ದಂಪತಿಗಳಿಂದ ಹಾಸ್ಯಮಯವಾದ ಅಭಿನಯ ರಸಮಯವಾಗಿತ್ತು. ಬಳಗದ ಮಹಿಳೆಯರು ಮಾಡಿದ ಗುಜರಾತಿ ಶೈಲಿಯ ''ಚೊಗಡಾ'' ನೃತ್ಯ ಮನಸೆಳೆಯಿತು ಹಾಗೂ



ನೃತ್ಯ ಸಂಭ್ರಮ



ಫ್ಯಾಷನ್ ಶೋ – ಮೋಡಿ ನೋಡಿ



ಆಹಾರ ಮೇಳದಲ್ಲಿ ವ್ಯಾಪಾರ ಭರಾಟೆ

ಯುವತಿಯರು ಮಾಡಿದ ಮಿಲನ 2020 ನೃತ್ಯ ವರ್ಣಮಯವಾಗಿತ್ತು.

ನಂತರ ಇದ್ದ ಕಾರ್ಯಕ್ರಮವೇ ಪುರುಷರ ವಸ್ತ್ರವಿನ್ಯಾಸದ ಪ್ರದರ್ಶನ, ಗಾಂಭೀರ್ಯದ ನಡಿಗೆ, ವಿವಿಧ ವಸ್ತ್ರದ ವಿನ್ಯಾಸವು ಎಲ್ಲರ ಪ್ರಶಂಸೆಗೆ ಪಾತ್ರವಾಯಿತು.

ಇಡೀ ಸಭೆಯನ್ನು ನಗೆ ಕಡಲಿನಲ್ಲಿ ತೇಲಿಸಿದ ಹಾಸ್ಯಮಯ ಮೈಮ್‌ಷೋ, ಎಲ್ಲರ ಮೆಚ್ಚುಗೆಯನ್ನು ಗಳಿಸಿ, ಪಾತ್ರದಾರಿ ರಮೇಶ್ ಭಟ್ ಅಭಿನಯಿಸಿದ ಪಾತ್ರಕ್ಕೆ ಕರ ತಾಡನದ ಸುರಿಮಳೆಯೇ ಆಯಿತು. ನಂತರದ ಯುವತಿಯರ ನೃತ್ಯವನ್ನು ಎಲ್ಲರೂ ಮೆಚ್ಚಿದರು. ಎಲ್ಲ ಕಾರ್ಯಕ್ರಮದ ಹಿಂದೆ ಶ್ರೀಮತಿ ವೀಣಾಶರತ್‌ರವರ ಶ್ರಮ ಹಾಗೂ ಅವರ ಅನುಪಸ್ಥಿತಿಯು ಎದ್ದು ಕಾಣುತ್ತಿತ್ತು.

ಕಟ್ಟ ಕಡೆಯದಾಗಿ ಎಲ್ಲರೂ ಕಾಯುತ್ತಿದ್ದ ಹುಲಿವೇಷ ಕುಣಿತಕ್ಕೆ ಎಲ್ಲರೂ ಹೆಜ್ಜೆ ಹಾಕಿ ಸಂಭ್ರಮಿಸಿದರು. ಯುವ ವಿಭಾಗದ ಸಂಚಾಲಕ ಶ್ರೀ ಕೃಷ್ಣ ಪ್ರಸಾದ್ ಹಾಗೂ ಯುವ ವಿಭಾಗದ ಕ್ರಿಯಾಶೀಲ ಸದಸ್ಯರು ಸಂಯೋಜಿಸಿದ ಈ ಕಾರ್ಯಕ್ರಮವು ಎಲ್ಲರ ಮೆಚ್ಚುಗೆಯನ್ನು ಗಳಿಸಿತು.

ಸದಸ್ಯರೆಲ್ಲರಿಗೂ ಹೌಸಿ ಆಟವನ್ನು ಸಂಯೋಜಿಸಿದ್ದು ಎಲ್ಲರೂ ಭಾಗವಹಿಸಿದರು. ಕಾರ್ಯಕ್ರಮದ ನಿರೂಪಣೆಯನ್ನು ಎಂ. ಕೃಷ್ಣಪ್ರಸಾದ್ ಮತ್ತು ಶಶಿಧರ್ ಹೆಬ್ಬಾರ್ ರವರು ಉತ್ತಮವಾಗಿ ನಿರ್ವಹಿಸಿ, ಚುರುಕಾದ ಮಾತು, ಮಿಮಿಕ್ರಿ ಹಾಗೂ ಬುದ್ಧಿ ಮತ್ತೆಯ ಪ್ರಶ್ನೆಗಳನ್ನು ಕೇಳುತ್ತಾ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.




## ಆನಂದ ಬಳಗದ ಸದಸ್ಯರಾಗಲು ಆಹ್ವಾನ

ಆನಂದ ಬಳಗ ಈಗಾಗಲೇ 2000 ಕ್ಕಿಂತಲೂ ಹೆಚ್ಚು ಸದಸ್ಯರನ್ನು ಹೊಂದಿದ್ದು, ವರ್ಷವಿಡೀ ನಡೆಯುವ ವಿವಿಧ ಕಾರ್ಯಚಟುವಟಿಕೆಗಳ ಮೂಲಕ ಸದಸ್ಯರಿಗೆ ಅತ್ಯಂತ ಪ್ರಿಯವಾಗುತ್ತಿದೆ. ಬಳಗದ ಸದಸ್ಯರು ತಮಗೆ ಪರಿಚಯವಿರುವ ನಮ್ಮ ಸಮಾಜಕ್ಕೆ ಸೇರಿರುವ ಸ್ನೇಹಿತರು, ಬಂಧು–ಬಳಗದವರನ್ನು ಬಳಗದ ಸದಸ್ಯರಾಗಲು ಪ್ರೇರೇಪಿಸಿ, ಬಳಗದ ಸದಸ್ಯ ಶಕ್ತಿಯನ್ನು ಹೆಚ್ಚಿಸಬೇಕಾಗಿ ವಿನಂತಿ.

ಬಳಗದ ಜಾಲತಾಣ www.anandabalaga.org ಯಲ್ಲಿ ಸದಸ್ಯತ್ವ ನೋಂದಣಿಯ ಅರ್ಜಿ ನಮೂನೆಗಳು ಲಭ್ಯವಿದ್ದು, Introduction Formನ್ನು ಸದಸ್ಯರು ತುಂಬಬೇಕು ಹಾಗೂ ಸದಸ್ಯತ್ವ ಅರ್ಜಿಯನ್ನು ಆಸಕ್ತರು ತುಂಬಿ ನಿಗದಿಪಡಿಸಿದ ಅರ್ಜಿ ಶುಲ್ಕದೊಂದಿಗೆ ಬಳಗದ ಕಚೇರಿಗೆ ಸಲ್ಲಿಸಲು ಕೋರಲಾಗಿದೆ

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : **ಶ್ರೀ ಎಂ. ಕೃಷ್ಣ ಪ್ರಸಾದ್**
ಸಂಚಾಲಕರು, ಸದಸ್ಯತ್ವ ಅಭಿವೃದ್ಧಿ ವಿಭಾಗ. (ದೂರವಾಣಿ : 9845018183)

# ಬಳಗದ ಕ್ರೀಡಾ ಮಿಲನ - 2020

- ವರದಿ : ಲಕ್ಷ್ಮಿ ರಾಜೇಶ್



ಕ್ರೀಡಾಜ್ಯೋತಿಯ ಜ್ವಲನ

ನಮ್ಮೆಲ್ಲರ ನಲ್ಮೆಯ ಆನಂದ ಬಳಗದ ಯುವ ವಿಭಾಗದಿಂದ ಜನವರಿ ತಿಂಗಳ 19ನೇ ತಾರೀಖಿನಂದು ಜಯನಗರದ ನ್ಯಾಷನಲ್ ಕಾಲೇಜು ಕ್ರೀಡಾಂಗಣದಲ್ಲಿ ಕ್ರೀಡಾ ಮಿಲನ 2020 ಅನ್ನು ಆಯೋಜಿಸಲಾಯಿತು. ಆ ಪ್ರಯುಕ್ತ ಭಾನುವಾರದ ಮುಂಜಾನೆ ಬಳಗದ ಅಭಿಮಾನಿಗಳು ಸರಿಸುಮಾರು 8.30ಕ್ಕೆ ಕ್ರೀಡಾಂಗಣದಲ್ಲಿ ಬಂದು ತಮ್ಮ ಆಸಕ್ತಿಯನ್ನು ತೋರಿದರು.

ವೇದಿಕೆಯಲ್ಲಿ ಶ್ರೀ ಪಿ.ಎಸ್. ಬಾಗಿಲ್ತಾಯ, ಶ್ರೀ ಎಂ.ಕೃಷ್ಣ ಪ್ರಸಾದ್, ಶ್ರೀ ಹರಿದಾಸ ಉಪಾಧ್ಯ ಹಾಗೂ ಶ್ರೀ ಎಂ.ಕೆ. ಗುರುಮೂರ್ತಿಯವರು ಉಪಸ್ಥಿತರಿದ್ದರು. ಶ್ರೀ ಎಂ. ಸತ್ಯನಾರಾಯಣ ಭಟ್ಟರವರ ನಿರೂಪಣೆಯೊಂದಿಗೆ ಕ್ರೀಡಾ ಮಿಲನವನ್ನು ಕಾರ್ತಿಕ್ ಉಪಾಧ್ಯಾಯರ ಪ್ರಾರ್ಥನೆ ಮೂಲಕ 9.30 ಕ್ಕೆ ಪ್ರಾರಂಭಗೊಳಿಸಲಾಯಿತು.

ಯುವ ವಿಭಾಗದ ಸಂಚಾಲಕ ಶ್ರೀ ಎಂ. ಕೃಷ್ಣ ಪ್ರಸಾದರ Winner Never Quits, Quitter Never Wins. (ವಿಜೇತರು ಎಂದಿಗೂ ಬಿಡುವುದಿಲ್ಲ. ಹೇಡಿಗಳು ಎಂದಿಗೂ ಗೆಲ್ಲುವುದಿಲ್ಲ). ಸುಭಾಷಿತದೊಂದಿಗೆ ಕಾರ್ಯಕ್ರಮವನ್ನು ಪ್ರಾರಂಭಿಸಿದರು. ಪ್ರತಿಯೊಬ್ಬರ ಜೀವನದಲ್ಲಿ ಕ್ರೀಡೆಯ ಮಹತ್ವವನ್ನು ಒತ್ತಿಹೇಳಿದ ಸಂಚಾಲಕರು ಸಭೆಯನ್ನು ಸ್ವಾಗತಿಸಿದರು.

ಮುಖ್ಯ ಅತಿಥಿಗಳಾದ ಶ್ರೀ ಪಿ.ಎಸ್. ಬಾಗಿಲ್ತಾಯ ಮತ್ತು ಕ್ರೀಡಾ ಸಂಚಾಲಕರಾದ ಶ್ರೀ ಎಂ.ಕೆ. ಗುರುಮೂರ್ತಿ ಅವರು ಆನಂದ ಬಳಗ ಕ್ರೀಡಾ ಪ್ರಚಾರದ ಜೊತೆಗೆ ಉತ್ತಮ ಆರೋಗ್ಯವನ್ನು ಕಾಪಾಡಿಕೊಳ್ಳಲು ಕ್ರೀಡೆ ಹೇಗೆ ಸಹಾಯ ಮಾಡುತ್ತದೆ ಎಂಬುದರ ಕುರಿತು ಮಾತನಾಡಿದರು.ಸಭೆಯನ್ನು ಅಲಂಕರಿಸಿದ ಗೌರವಾನ್ವಿತರು ಸಭೆಯಲ್ಲಿ ಇದ್ದ ಬಳಗದ ಅಭಿಮಾನಿ ಗಳನ್ನು ಸ್ವಾಗತಿಸುತ್ತಾ ಸ್ಪರ್ಧಾಳುಗಳನ್ನು ಹುರಿದುಂಬಿಸಿ ತಮ್ಮ ಹಿತನುಡಿಗಳಿಂದ ಪ್ರೋತ್ಸಾಹಿಸಿದರು.



ಸದಸ್ಯರು ಈ ಸಂದರ್ಭದಲ್ಲಿ ಉತ್ಸಾಹಭರಿತರಾಗಿ ಸ್ನೇಹ ಭಾವದಿಂದ ಎಲ್ಲ ಕ್ರೀಡೆಗಳಲ್ಲಿ ಪಾಲ್ಗೊಳ್ಳುತ್ತೇವೆ ಎಂದು ಪ್ರಮಾಣ ವಚನ ಸ್ವೀಕರಿಸಿ, ಆಕರ್ಷಕ ಸಂಗೀತದೊಂದಿಗೆ ಪಥಸಂಚಲನದಲ್ಲಿ ಪಾಲ್ಗೊಂಡರು. ಗಣ್ಯರು ಸದಸ್ಯರ ಪ್ರಭಾವಶಾಲಿ ಪಥಸಂಚಲನದ ವಂದನೆಯನ್ನು ಸ್ವೀಕರಿಸಿದರು. ಬಳಗದ ಯುವ ಸದಸ್ಯರಿಂದ ಕ್ರೀಡಾಜ್ಯೋತಿಯನ್ನು ಬೆಳಗಿಸಲಾಯಿತು.

ಸುಮಾರು 10 ಗಂಟೆಗೆ ಮಹಿಳೆಯರ ಮತ್ತು 50 ವರ್ಷ ಮೇಲ್ಪಟ್ಟ ಪುರುಷರ ಕ್ರಿಕೆಟ್ ಪ್ರಾರಂಭವಾಯಿತು. ಈ ಕ್ರಿಕೆಟ್ ಆಟವು ಎಲ್ಲಾ ಉತ್ಸಾಹಿ ಕ್ರೀಡಾಳುಗಳಿಗೆ ಪ್ರೋತ್ಸಾಹದಾಯಕ ವಾದ ವಾತಾವರಣವನ್ನು ಸೃಷ್ಟಿಸಿತು. ಇದರಲ್ಲಿ 50ಕ್ಕೂ ಹೆಚ್ಚು ಆಟಗಾರರು 3 ತಂಡಗಳಾಗಿ ಸೇರಿಕೊಂಡು ಫೈನಲ್‌ಗಾಗಿ ಸ್ಪರ್ಧಿಸಿದರು. ಪ್ರತಿ ಪಂದ್ಯವು 4 ಓವರ್‌ಗಳಾಗಿದ್ದು, ಹೆಂಗಸರು ಆಟದ ಸಿಂಹ ಪಾಲನ್ನು ಹೊಂದಿದ್ದರು. ಹಿರಿಯ ಪುರುಷರು ಆಟದಲ್ಲಿ ತಮ್ಮ ಪ್ರಾವೀಣ್ಯತೆಯನ್ನು ತೋರಿಸಿ. ತಂಡವನ್ನು ಗೆಲ್ಲಲು ಸಹಾಯ ಮಾಡಿದರು.

ಅದೇ ಸಮಯದಲ್ಲಿ 6 ರಿಂದ 16 ವರ್ಷ ವಯಸ್ಸಿನ ಮಕ್ಕಳ ವಿವಿಧ ಆಟೋಟ ಸ್ಪರ್ಧೆಗಳಾದ ಓಟದ ಸ್ಪರ್ಧೆ, ಸಂಗೀತ ಕುರ್ಚಿ, ಲೆಮನ್ ಅಂಡ್ ಸ್ಪೂನ್ ಇನ್ನು ಮುಂತಾದ ಸ್ಪರ್ಧೆಗಳನ್ನು ನಡೆಸಲಾಯಿತು. ಓಟದ ಸ್ಪರ್ಧೆಯು ಹೆಚ್ಚು ಸ್ಪರ್ಧಿಗಳನ್ನು ಆಕರ್ಷಿಸಿತು. ಮಕ್ಕಳು ನಿಂಬೆ ಕೆಳಗೆ ಬಿದ್ದಾಗ ಅದರ ಹಿಂದೆ ಓಡುತ್ತಿರುವುದನ್ನು ಮತ್ತು ಪುಸ್ತಕಗಳನ್ನು ಸಮತೋಲನಗೊಳಿಸುವಾಗ ಅವು ಅವರ ತಲೆಯಿಂದ ಹಾರಿಹೋಗುವುದನ್ನು ನೋಡಿದ ಪ್ರೇಕ್ಷಕರು ನಗೆಗಡಲಲ್ಲಿ ಸಿಲುಕಿದರು. ಪೋಷಕರು ತಮ್ಮ ಮಕ್ಕಳಿಗಿಂತ ಹೆಚ್ಚು ಉತ್ಸುಕರಾಗಿದ್ದರು.

ತದನಂತರ ಮಹಿಳೆಯರು ಮತ್ತು ಪುರುಷರ ನಡಿಗೆ ಓಟ, ಹಗ್ಗ ಜಗ್ಗಾಟ, ಕ್ರಿಕೆಟ್, ತ್ರೋಬಾಲ್ ಮುಂತಾದ ಸ್ಪರ್ಧೆಗಳನ್ನು ನಡೆಸಲಾಯಿತು. ಪುರುಷರ ಕ್ರಿಕೆಟ್ ಅತ್ಯಂತ ಆಸಕ್ತಿಯನ್ನು ಹುಟ್ಟುಹಾಕಿತು. ಎಲ್ಲಾ 5 ತಂಡಗಳು ಕ್ರಿಕೆಟ್‌ನಲ್ಲಿ ಗೆಲ್ಲಲು ತಮ್ಮ ಅತ್ಯುತ್ತಮ ಕೌಶಲ್ಯವನ್ನು ತೋರಿಸಿದವು. ಅಂತಿಮವಾಗಿ ಒಂದು ತಂಡ ಕಪ್ ಗೆದ್ದಿತು. ಪುರುಷರಿಗಾಗಿ ವಾಲಿಬಾಲ್ ಸಹ ಆಯೋಜಿಸಲಾಗಿತ್ತು.

ಹಾರ್ದಿಕ ಶುಭಾಶಯಗಳೊಂದಿಗೆ

ಹೋಟೆಲ್ ಅಜಂತಾ ಆತಿಥ್ಯಸೇವಾ ಸಮೂಹ

**HOTEL AJANTHA GROUP OF HOSPITALITY SERVICES**

# HOTEL AJANTHA

***A Boarding and Lodging Hotel of repute with spacious place for parking Party Halls and All facilities***

No. 22/A, Mahatma Gandhi Road, Bangalore-560 001
Phone : 25584321 Fax : 080-25584780
Email : bagilthaya@vsnl.com

## AJANTHA TRINITY INN

***Luxurious Rooms for Comfortable Stay***

Trinity Circle, Mahatma Gandhi Road
Bangalore-560 001

Phone : 25559491 - 5 lines

**YOUR SATISFACTION - OUR MOTTO**

ನಿಮ್ಮ ಸಂತೃಪ್ತಿಯೇ ನಮ್ಮ ಧ್ಯೇಯ

*With best compliments*

# FIRETECH
## BOILERS PRIVATE LTD.
(An ISO 9001 : 2015 Certified Company)

**Office:** "FIRETECH HOUSE" , No. 211, 2nd Cross, 38th Main, B.T.M Layout, 2nd Stage, Bangalore - 560 068, Karnataka. Ph.: 080-26683686 / 26683921, Mob. : 73384 87934

**Works:** 121/C2,Bommasandra Industrial Area, Anekal Taluk, Bangalore - 560 099, Karnataka. Ph.: 080-27834189

E-mail : firetechhouse@gmail.com Website : www.firetechboilers.com

## *Manufacturing Steam Boilers (IBR & Non IBR)*

- Thermic Fluid Heaters
- Hot Air Generators
- Waste Heat Boilers
- Agro Dryers







- Heat Exchanger
- MDC
- Accumulator etc.,







ಈಗ ಬ್ಯಾಂಕಿಂಗ್
ಒಂದು ಆನಂದದ ಅನುಭೂತಿ
₹
ಕೆಬಿಎಲ್
ಮೊಬೈಲ್ ಪ್ಲಸ್
• ಸ್ವಂತ ಖಾತೆಗಳಿಗೆ ಹಣ ವರ್ಗಾವಣೆ / ಕೆಬಿಎಲ್‌ನೊಳಗೆ ಹಣ ವರ್ಗಾವಣೆ
• ಐಎಂಪಿಎಸ್ / ಎನ್‌ಇಎಫ್‌ಟಿ / ಆರ್‌ಟಿಜಿಎಸ್ ಹಣ ವರ್ಗಾವಣೆ
• ಸ್ಕ್ಯಾನ್ ಆ್ಯಂಡ್ ಪೇ ಸೌಕರ್ಯ
• ಯುಟಿಲಿಟಿ ಬಿಲ್ ಪಾವತಿ / ಮೊಬೈಲ್ / ಡಿಟಿಹೆಚ್ ರೀಚಾರ್ಜ್ / ಕ್ರೆಡಿಟ್ ಕಾರ್ಡ್ ಬಿಲ್ ಪಾವತಿ
• ಯುಪಿಐ ಸೇವೆಗಳು, ಕೆಬಿಎಲ್ ಎಂ-ಪಾಸ್‌ಬುಕ್ ಮತ್ತು ಕೆಬಿಎಲ್ ಲೊಕೇಟರ್‌ಗಳ ಸಮಗ್ರ ಕಾರ್ಯಾಚರಣೆ
• ಡೆಬಿಟ್ ಕಾರ್ಡ್ ಕಂಟ್ರೋಲ್ (ಪಿನ್ ಜನರೇಟ್ / ಬ್ಲಾಕಿಂಗ್ / ಸ್ವಿಚ್ ಆನ್ / ಆಫ್)
• ಮ್ಯೂಚುವಲ್ ಫಂಡ್ ಹೂಡಿಕೆ ಸೌಲಭ್ಯ
• ಬುಕಿಂಗ್ ಮತ್ತು ರೀಚಾರ್ಜ್ - ನಿಮ್ಮ ಬೆರಳಂಚಿನಲ್ಲಿ
• ಹೆಚ್ಚು ಸುರಕ್ಷಿತ ಬಯೋಮೆಟ್ರಿಕ್ ಖಾತರಿ
(ಫಿಂಗರ್ ಪ್ರಿಂಟ್ ಸೌಲಭ್ಯವಿರುವ ಸ್ಮಾರ್ಟ್‌ಫೋನ್‌ಗಳಲ್ಲಿ ಮಾತ್ರ)
• ಎಟಿಎಂನಿಂದ ಕಾರ್ಡ್ ರಹಿತ ಹಣ ಹಿಂಪಡೆತ
• ಆನ್‌ಲೈನ್ ಡಿಪಾಸಿಟ್ ಖಾತೆ ತೆರೆಯುವಿಕೆ, ಅಕೌಂಟ್ ಸ್ಟೇಟ್‌ಮೆಂಟ್ ಮತ್ತು ವಿಚಾರಣೆ
• ಆನ್‌ಲೈನ್ ಕೆಬಿಎಲ್ ಸುರಕ್ಷಾ / ಪಿಎಂಎಸ್‌ಬಿವೈ / ಪಿಎಂಜೆಜೆಬಿವೈ ನೋಂದಾವಣೆ
• ದೇವಸ್ಥಾನಗಳ ಇ.ಹುಂಡಿ - ದೇಣಿಗೆ ಮತ್ತಿತರ ಹೆಚ್ಚುವರಿ ಸೇವೆಗಳು
Available on
GET IT ON Google Play
Download on the App Store
ಷರತ್ತುಗಳು ಅನ್ವಯ
ಸಾರ್ವಜನಿಕರಿಗೆ ಬ್ಯಾಂಕಿಂಗ್ ಸುರಕ್ಷೆಯ ಸಂದೇಶ
ಯಾವುದೇ ವ್ಯಕ್ತಿ / ಸಾರ್ವಜನಿಕರ / ಟ್ರಸ್ಟ್ ಖಾತೆಗಳನ್ನು ಮತ್ತು ನಿಧಿಗಳನ್ನು ಆರ್.ಬಿ.ಐ. ಇರಿಸಿಕೊಳ್ಳುವುದಿಲ್ಲ. ನಿಮಗೆ ಕೊಡುಗೆಗಳು ಬಂದಿವೆ ಅಂತ ಆರ್.ಬಿ.ಐ. ಹೆಸರಿನಲ್ಲಿ ಯಾವುದೇ ದೂರವಾಣಿ ಅಥವಾ ಇ-ಮೇಲ್ ಬಂದರೆ ಅವುಗಳಿಗೆ ಮೋಸ ಹೋಗಬೇಡಿ.
ಹೆಚ್ಚಿನ ವಿವರಗಳಿಗಾಗಿ ನಿಮ್ಮ ಹತ್ತಿರದ ಬ್ಯಾಂಕ್ ಶಾಖೆಯನ್ನು ಸಂಪರ್ಕಿಸಿ ಅಥವಾ ಟೋಲ್ ಫ್ರೀ ಸಂಖ್ಯೆ 1800 425 1444ಗೆ ಕರೆ ಮಾಡಿ • Follow us on : / karnatakabank
ಕರ್ಣಾಟಕ ಬ್ಯಾಂಕ್
ನಿಮ್ಮ ಕುಟುಂಬದ ಬ್ಯಾಂಕ್. ಭಾರತದಾದ್ಯಂತ.
ನೋಂದಾಯಿತ ಹಾಗೂ ಪ್ರಧಾನ ಕಚೇರಿ: ಮಂಗಳೂರು - 575 002
CIN: L85110KA1924PLC001128
ಇಮೇಲ್: info@ktkbank.com ವೆಬ್‌ಸೈಟ್: www.karnatakabank.com

# FRIDGE HOUSE

Distributor & Dealer for


**HAVELLS Brand (Lloyd) AC's &**
**CARRIER MIDEA Air Conditioners**


Tower AC


Split AC


Cassette AC


Window AC


Ductable AC

Contact Persons: Mr. M K Prasad & Mr. B Krishnaswamy – M: 9845330571

# FRIDGE HOUSE

FRIDGE HOUSE DELIVERING TRUST

EMERSON Climate Technologies AUTHORIZED FULL-LINE WHOLESALER

## Wholesaler & Importers,

M/s. Emerson Commercial & Residential Solutions

Dealers: M/s. Kirloskar Pneumatic Co. Ltd.

M/s. Gujarat Fluorochemicals Ltd.

Kirloskar Enriching Lives

## EQUIPMENTS & COMPONENTS. for

**HVAC & R,* COLD ROOMS,* RIPENING CHAMBERS,* HEAT PUMPS.**

Adithya Tower # 23, V.S.N Road, Shivaji Nagar, Bengaluru – 560 051.
Ph. No: 080-22861936, 22860260, 41513104, 41513105 & 41238022
Email ID : info@fridgehouse.net; Web Site: www.fridgehouse.net


Contact Persons: M.K. Prasad & Mr. Nagesh D Prabhu – M: 9845217197

*With Best Compliments from :*

# HOTEL DWARAKA

Anand Rao Circle
BANGALORE-560 009

**N.R. Narayana Rao**
**Managing Partner**




## ವಸತಿ ಗೃಹ

ನಮ್ಮ ವಿಶೇಷತೆಗಳು
ಸಕಲ ಸೌಲಭ್ಯಗಳನ್ನೊಳಗೊಂಡ, ಉತ್ತಮ ಗಾಳಿ, ಬೆಳಕಿರುವ,
ನಿರಂತರ ನೀರು ವಿದ್ಯುತ್ ಸರಬರಾಜಿರುವ, ಅತಿ ಹೆಚ್ಚಿಲ್ಲದ ಬಾಡಿಗೆಯಿರುವ,
ವಿಶಾಲವಾದ ಕೊಠಡಿಗಳು, ಮನಸ್ಸಿಗೆ ಶಾಂತಿ ನೆಮ್ಮದಿ ತರುವ ಶಾಂತ ವಾತಾವರಣ,
ನಮ್ರತೆಯ ಸೇವೆ, ಎಸ್.ಟಿ.ಡಿ./ಐ.ಎಸ್.ಡಿ. ಮತ್ತು
ಕಾರು ನಿಲ್ಲಿಸಲು ಅನುಕೂಲತೆ ಇತ್ಯಾದಿ...

**ದೂರವಾಣಿ : 22265011 (8 ಮಾರ್ಗಗಳು), 22268263, 22268264**

*With Best Compliments from :*

# ಹೋಟೆಲ್ ಶೀತಲ್

**ಆನಂದರಾವ್ ವೃತ್ತ, ಬೆಂಗಳೂರು – 560 009**

## HOTEL Sheethal

#32/12, Sheshadri Road,
Ananda Rao Circle,
Bangalore - 560 009
Ph : 41139560 - 64
Mobile : 98457 77381



## Sheethal Residency

# 3/1, Old Sawar Lane, Sheshadri Road
Near Sangolli Rayanna Circle,
Bangalore - 560 009
Ph : 080 2234 3777 / 80 / 81
email : info@sheetalresidency.com
URL : www.sheetalresidency.com

ಎ. ಪ್ರಭಾಕರ ರಾವ್ ಮ್ಯಾನೇಜಿಂಗ್ ಪಾರ್ಟ್‌ನರ್

---

ಶುಭಾಶಯಗಳನ್ನು ಕೋರುವವರು



|| ಹರಿಃ ಓಂ ||

# ಉಪಾಧ್ಯ ಮತ್ತು ಕಂಪನಿ

(ಆಯುರ್ವೇದ ಔಷಧಗಳ ಸಗಟು ಮಾರಾಟಗಾರರು)



**ಸಿದ್ಧಯ್ಯ ರಸ್ತೆ, ವಿಲ್ಸನ್ ಗಾರ್ಡನ್, ಬೆಂಗಳೂರು – 27, ದೂರವಾಣಿ : 22235533, 22241121**

## ಉಪಾಧ್ಯ ಆಯುರ್ವೇದ ಭಂಡಾರ

ಮತ್ತಿಕೆರೆ : 15/33, ಮೊದಲನೆಯ ಮುಖ್ಯರಸ್ತೆ
ಬೆಂಗಳೂರು – 560 054
ದೂರವಾಣಿ : 23372422

ಜಯನಗರ : 1333, 26ನೇ ಮುಖ್ಯರಸ್ತೆ,
4ನೇ 'ಟಿ' ಬ್ಲಾಕ್, ಬೆಂಗಳೂರು – 41
ದೂರವಾಣಿ : 26639321

ಶ್ರೀರಾಂಪುರ: 389, ಮಹಾಕವಿ ಕುವೆಂಪು ರಸ್ತೆ,
ನಾಗಪ್ಪ ಬ್ಲಾಕ್, ಬೆಂಗಳೂರು – 21

ನಮ್ಮ ಎಲ್ಲಾ ಸಂಸ್ಥೆಗಳಲ್ಲಿ ತಜ್ಞ
ವೈದ್ಯರುಗಳಿಂದ ಚಿಕಿತ್ಸಾ ಸೌಲಭ್ಯ
ದೊರೆಯುತ್ತದೆ.
ಸಮಯ ಬೆಳಿಗ್ಗೆ 11.00 ರಿಂದ 3.00 ಮತ್ತು
ಸಂಜೆ 7.00 ರಿಂದ 8.30 ರವರೆಗೆ
(ಆನಂದ ಬಳಗದ ಸದಸ್ಯರಿಗೆ
ರಿಯಾಯಿತಿ ದರದಲ್ಲಿ ಸೇವೆ ಲಭ್ಯ)

*With Best Compliments from :*

# P.C. RAO

## RAO IDEAL SERVICES PRIVATE LIMITED

*Specialists in*

Staff Outsourcing and Facility Management

No. 63, 5th Cross, Vasanth Nagar,
Bangalore - 560 052
Mobile : 98444 94630
e-mail : raoideal@yahoo.co.in



## ENGINEERING CONSULTANCY SERVICES FOR CONSTRUCTIONS

## CRUTHI Consultants Consortium Pvt. Ltd.

**Services Offered :**

**In**

- Structural Engineering
- Civil Consultancy
- Project Management
- Water & Sewerage, Fire etc.,
- Electrical & Security
- HVAC & Networking


**For**


- I T Industry
- Factories
- Institutions
- Hotels and Resorts
- Commercial
- Residential

No. 204, 2ND MAIN ROAD, 4TH BLOCK,
RAJAJINAGAR, BANGALORE – 560 010
TEL: +91 80 23 15 20 14, +91 99 45 66 63 06
FAX: +91 80 41 28 22 07
EMAIL: info@cruthi.com, WEBSITE: www.cruthi.in

CONTACT:

| | |
|---|---|
| MR. DINESH RAO MUNDRUPPADY | MOB: 99456 88955 |
| MR. VASUDEVAN T S | MOB: 98450 26743 |
| MR. VIJAY KUMAR KULKARNI | MOB: 99456 96649 |





ಕತ್ತಲೆಯಿಂದ ಬೆಳಕಿನೆಡೆಗೆ ಸಾಗಲು ದೈವ ಸಾಕ್ಷಾತ್ಕಾರ ಮಂದಿರ...

# ಶ್ರೀ ಕ್ಷೇತ್ರ ಮಂತ್ರಾಲಯ

# ಶ್ರೀ ಗುರುರಾಘವೇಂದ್ರ ಜ್ಯೋತಿಷ್ಯ ಕೇಂದ್ರ

ವೇದಬ್ರಹ್ಮ ಜ್ಯೋತಿಷ್ಯ ರತ್ನಾಕರ, ರಾಷ್ಟ್ರೀಯ ತ್ರಿಕಾಲಜ್ಞಾನಿ

## ಆಚಾರ್ಯ ಶ್ರೀ ವಿಜೇಂದ್ರ ಗುರೂಜೀ

ಕೇರಳ ಪ್ರಧಾನ ತಾಂತ್ರಿಕರು, ಆಧ್ಯಾತ್ಮಿಕ ಚಿಂತಕರು, ಜ್ಯೋತಿಷ್ಯ ವಾಸ್ತು ಮಂತ್ರಶಕ್ತಿ ಪರಿಣಿತರು

ಅಷ್ಟಮಂಗಲ ದೈವ ಪ್ರಶ್ನೆ, ಜಾತಕ, ಹಸ್ತ, ಫೋಟೋ ನೋಡಿ ನಿಮ್ಮ ಜೀವನದ ಸಂಪೂರ್ಣ ಭವಿಷ್ಯವನ್ನು ಸತ್ಯಸಾರಾಂಶವಾಗಿ ನುಡಿಯುತ್ತಾರೆ.

- ಜೀವನದಲ್ಲಿ ಮನುಷ್ಯ ಒಂದಲ್ಲ ಒಂದು ಸಮಸ್ಯೆಗಳಿಂದ ಬಂಧಿ ಆಗಿದ್ದಾನೆ. ಆತ ನೆನೆಯುವುದೇ ಒಂದು ನಡೆಯುವುದೇ ಇನ್ನೊಂದು. ಎಷ್ಟೇ ಪ್ರಾಮಾಣಿಕವಾಗಿ ಜೀವನ ನಡೆಸಿದರೂ ಸಮಸ್ಯೆಗಳು ಬೆಂಬಿಡದೆ ಕಾಡುತ್ತಿರುತ್ತದೆ. ಚಿಂತಿಸಬೇಡಿ ಭಗವಂತ ನಂಬಿದವರನ್ನು ಎಂದಿಗೂ ಕೈ ಬಿಡುವುದಿಲ್ಲ. ಒಬ್ಬ ಗುರುವಿನ ರೂಪದಲ್ಲಿ ಬಂದು ಪ್ರತ್ಯಕ್ಷವಾಗಿ ದಾರಿತೋರಿಸುತ್ತಾನೆ.
- ನಿಮ್ಮ ಭವ್ಯ ಭವಿಷ್ಯದ ಕನಸು ನನಸಾಗಲು **ಆಚಾರ್ಯ ಶ್ರೀ ವಿಜೇಂದ್ರ ಗುರೂಜಿ** ಅವರನ್ನು ಸಂಪರ್ಕಿಸಿ ಅಪಾರ ಜ್ಞಾನ, ವಾಕ್‌ಸಿದ್ಧಿ, ಮಂತ್ರಸಿದ್ಧಿಯಿಂದ ಜನರಲ್ಲಿ ಪ್ರಶಂಸೆ ಪಡೆದಿದ್ದಾರೆ ಹಾಗೂ ಸಾವಿರಾರು ಜನರಿಗೆ ಸಾರ್ಥಕ ಪರಿಹಾರ ನೀಡಿದ ಕೀರ್ತಿ ಪಡೆದಿದ್ದಾರೆ. ಇದು ನಿಜ ಬದುಕಿನ ದಾರಿದೀಪ. ಇಂದೇ ಸಂಪರ್ಕಿಸಿ **ಶ್ರೀ ಕಟೀಲು ಶ್ರೀದುರ್ಗಾಪರಮೇಶ್ವರಿ ದೇವಿ** ಆರಾಧಕರು.

ನಿಮ್ಮ ಸಮಸ್ಯೆ ಏನೇ ಇರಲಿ ಅದು ಎಷ್ಟೇ ಕಠಿಣವಾಗಿರಲಿ ಕೇರಳ ಅಥರ್ವಣವೇದದ 60 ವರ್ಷಗಳ ಹಳೆಯ 108 ಜ್ಯೋತಿಷ್ಯ ಬ್ರಹ್ಮ-ತಂತ್ರ ವಿದ್ಯೆಗಳಿಂದ ನೂರಕ್ಕೆ ನೂರರಷ್ಟು ಶಾಶ್ವತ ಪರಿಹಾರ ಶತಸಿದ್ಧ.

ನಿಮ್ಮ ಸಮಸ್ಯೆಗಳಾದ : ಮಾನಸಿಕ ನೆಮ್ಮದಿ ಇಲ್ಲದಿರುವುದು, ಮನೆಯಲ್ಲಿ ಅಶಾಂತಿ, ದುಷ್ಟಶಕ್ತಿ ತೊಂದರೆ, ಮಕ್ಕಳ ಅಸಭ್ಯ ವರ್ತನೆ, ವಿದ್ಯಾಭ್ಯಾಸ ಹಿನ್ನಡೆ, ವ್ಯಾಪಾರ-ಉದ್ಯೋಗ ನಷ್ಟ, ಮದುವೆ ವಿಳಂಬ, ಪ್ರೇಮ ವಿಚಾರ, ದಾಂಪತ್ಯ ಕಲಹ, ಡೈವರ್ಸ್ ತೊಂದರೆ, ಸಂತಾನ, ಲೈಂಗಿಕ ತೊಂದರೆ, ಆರೋಗ್ಯ ಸಮಸ್ಯೆ, ಕೋರ್ಟ್‌ಕೇಸ್, ಆಸ್ತಿವಿಚಾರ, ಶತ್ರುಕಾಟ, ಮಾಟ-ಮಂತ್ರ ವಶೀಕರಣ ನಿವಾರಣೆ, ಅತ್ತೆ-ಸೊಸೆ ಕಲಹ, ಹಣಕಾಸಿನ ಸಮಸ್ಯೆ ಇನ್ನು ಯಾವುದೇ ಸಮಸ್ಯೆಗಳಿಂದ ಜೀವನದಲ್ಲಿ ಮಾನಸಿಕವಾಗಿ ನೊಂದು ಇನ್ನೊಬ್ಬರ ಬಳಿ ಹೇಳಲಾಗದೆ ಮನಸಿನಲ್ಲಿ ಕೊರಗುತ್ತಿದ್ದರೆ ಚಿಂತಿಸಬೇಡಿ ಉತ್ತಮ ಸಲಹೆ ಶಾಶ್ವತ ಪರಿಹಾರ ಶತಸಿದ್ಧ.

**ವಿ.ಸೂ : ಬಹಳ ವಯಸ್ಸಾಗಿದ್ದರೂ ಮದುವೆ ಆಗದೆ ಬಳಲುತ್ತಿರುವ ವಧು-ವರರಿಗೆ ಅತಿ ಶೀಘ್ರವಾಗಿ ವಿವಾಹ ಪ್ರಾಪ್ತಿ ಆಗಲು ವಿಶೇಷ ಪರಿಹಾರ ಮಾಡಿ ಕೊಡುತ್ತಾರೆ.**

ದೂರದ ಊರಿನವರಿಗೆ ಫೋನ್ ಮೂಲಕ ಪರಿಹಾರ ತಿಳಿಸುತ್ತಾರೆ. **ದೂ: 99452 22228**

ಸರ್ವೇ ಜನೋ ಸುಖಿನೋ ಭವಂತು

ಸ್ಥಳ : **ಶ್ರೀಕ್ಷೇತ್ರ ಮಂತ್ರಾಲಯ ಶ್ರೀ ಗುರುರಾಘವೇಂದ್ರ ಜ್ಯೋತಿಷ್ಯ ಸಲಹೆ - ಪರಿಹಾರ ಕೇಂದ್ರ**
157, 1ನೇ ಮಹಡಿ, ಶ್ರೀರಾಮ ಪ್ಲಾಜಾ, ಸತೀಶ್ ಸ್ಟೋರ್ ಎದುರು, ಡಿ.ವಿ.ಜಿ. ರೋಡ್, ಬಸವನ ಗುಡಿ, ಬೆಂಗಳೂರು - 04

ಬರುವ ಮೊದಲು ದೂರವಾಣಿ ಮೂಲಕ ಭೇಟಿಯ ಸಮಯ ಖಚಿತಪಡಿಸಿಕೊಂಡು ಬನ್ನಿ

**ಸಮಯ: ಬೆಳಿಗ್ಗೆ 11.00 ರಿಂದ ರಾತ್ರಿ 9.00**



ಪಥ ಸಂಚಲನಕ್ಕೆ ರೆಡಿ...



ವಿಜಯದ ಉಲ್ಲಾಸ...

ಮಹಿಳಾ ತ್ರೋಬಾಲ್ ಪಂದ್ಯವು ದಿನದ ಬಹುನಿರೀಕ್ಷಿತ ಸ್ಪರ್ಧೆಯಾಗಿತ್ತು. 4 ತಂಡಗಳಲ್ಲಿ 40 ಮಹಿಳೆಯರು ಟ್ರೋಫಿ ಗೆಲ್ಲಲು ಸ್ಪರ್ಧಿಸಿದರು. ಅಂತಿಮವಾಗಿ ಪುರುಷರು ಹಾಗೂ ಮಹಿಳೆಯರಿಗಾಗಿ ಸಂಗೀತ ಕುರ್ಚಿ ಮತ್ತು ಹಗ್ಗ ಜಗ್ಗಾಟ ದೊಂದಿಗೆ ಸ್ವಲ್ಪ ಮೋಜಿನ ಸಮಯ, ಇದರಲ್ಲಿ ಎಲ್ಲಾ ಆಹ್ವಾನಿತರು ಭಾಗವಹಿಸಿ ಕಾರ್ಯಕ್ರಮವನ್ನು ಆನಂದಿಸಿದರು.

ಬಳಗದ ಕ್ರಿಯಾಶೀಲ ಸದಸ್ಯರು ವಿಜೇತರ ಪಟ್ಟಿಯನ್ನು ಸಿದ್ಧಪಡಿಸುತ್ತಿದ್ದರು, ಬಳಗದ ಹಿರಿಯರು ವಿಜೇತರಿಗೆ ಪ್ರಶಸ್ತಿಗಳನ್ನು ನೀಡಿ ಗೌರವಿಸಿದರು. ಆನಂದದಿಂದ ಹಿಗ್ಗಿ ವಿಜೇತರು ಅಮೂಲ್ಯವಾದ ನೆನಪುಗಳನ್ನು ಕ್ಯಾಮೆರಾಗಳಲ್ಲಿ ಸೆರೆಹಿಡಿದು ಮುಂದಿನ ಪಂದ್ಯಗಳಿಗೆ ತಯಾರಾಗುತ್ತಿದ್ದರು. ಬೆಳಗ್ಗೆ 9.30 ರಿಂದ ಸಂಜೆ 5.30ರ ವರೆಗೆ ಎಲ್ಲ ಕ್ರೀಡೆಗಳಲ್ಲಿ ಸುಮಾರು 300ಕ್ಕೂ ಹೆಚ್ಚು ಸದಸ್ಯರು ಉತ್ಸಾಹದಿಂದ ಭಾಗವಹಿಸಿ ಆನಂದಿಸಿದರು.

ಬೆಳಗಿನ ಬಿಸಿಯಾದ ರುಚಿಕರ ಉಪಹಾರದ ವ್ಯವಸ್ಥೆಯನ್ನು ಹೋಟೆಲ್ ಪೂರ್ಣಿಮಾದ ಮಾಲೀಕರಾದ ಶ್ರೀ ಬಿ.ರಾಮಚಂದ್ರ ಉಪಾಧ್ಯಾಯರು ಮಾಡಿದ್ದರು. ಮಧ್ಯಾಹ್ನದ ಶುಚಿ ರುಚಿಯಾದ ಊಟ ಮತ್ತು ಸಂಜೆಯ ಚಹಾ, ಕಾಫಿ ವ್ಯವಸ್ಥೆಯನ್ನು ಹೋಟೆಲ್ ಅನ್ನಪೂರ್ಣ ಮಾಲೀಕರಾದ ಶ್ರೀ ಯು.ವಿ.ಕೃಷ್ಣಮೂರ್ತಿರವರು ಪ್ರಾಯೋಜಿಸಿದರು. ಕ್ರೀಡಾ ಪಟುಗಳು ಬಿಸಿಲಿನ ಬೇಗೆಗೆ ದಣಿಯದಂತೆ ಶ್ರೀ ಭಾಸ್ಕರ್ ರಾವ್‌ರವರು ತಂಪಾದ ಮಜ್ಜಿಗೆಯ ವ್ಯವಸ್ಥೆ ಮಾಡಿದರು. ಕ್ರೀಡಾಮಿಲನದ ಸುಂದರವಾದ ನೆನಪುಗಳನ್ನು ಶ್ರೀ ಕೆ. ಬಾಲಕೃಷ್ಣ ಉಪಾಧ್ಯಾಯರು ತಮ್ಮ ಕ್ಯಾಮೆರಾದಲ್ಲಿ ಸೆರೆಹಿಡಿದರು.

ಹೀಗೆ ಎಲ್ಲ ಸಹೃದಯ ಸದಸ್ಯರ ಸಂಪೂರ್ಣ ಸಹಕಾರದಿಂದ 2020ರ ಕ್ರೀಡಾಮಿಲನ ಯಶಸ್ವಿಯಾಗಿ ನಡೆಯಿತು. ಈ ಕ್ರೀಡಾಮಿಲನಕ್ಕೆ ಶ್ರಮಿಸಿ ಯಶಸ್ವಿಗೊಳಿಸಿದ ಎಲ್ಲ ಸಹೃದಯ ಬಂಧುಗಳಿಗೆ ನಮ್ಮ ಹೃದಯ ಪೂರ್ವಕ ನಮನಗಳು.

## ಕ್ರೀಡಾ ಮಿಲನ – ಗುಂಪು ಆಟಗಳ ವಿಜೇತರು

| ಕ್ರ. ಸಂ. | ಕ್ರೀಡಾ ಚಟುವಟಿಕೆ | ವಿನ್ನರ್ಸ್ | ರನ್ನರ್ಸ್ |
|---|---|---|---|
| 1 | ಕ್ರಿಕೆಟ್ (ಮಹಿಳೆ ಮತ್ತು ಪುರುಷರು) | ಬಿಂದುಶ್ರೀ ಮತ್ತು ತಂಡ | ಸುಧಾ ಸಂದೀಪ್ ಮತ್ತು ತಂಡ |
| 2 | ಕ್ರಿಕೆಟ್(ಪುರುಷರು) | ದರ್ಶನ್ ಮತ್ತು ತಂಡ | ವೈಶಾಖ್ ಮತ್ತು ತಂಡ |
| 3 | ವಾಲಿಬಾಲ್ (ಪುರುಷರು) | ಸಂದೀಪ್‌ರಾವ್ ಮತ್ತು ತಂಡ | ಪ್ರಶಾಂತ್ ಕಲ್ಲೂರಾಯ ಮತ್ತು ತಂಡ |
| 4 | ಹಗ್ಗ ಜಗ್ಗಾಟ (ಬಾಲಕರು ಮತ್ತು ಬಾಲಕಿಯರು) | ಸಿದ್ಧಾಂತ್ ಮತ್ತು ತಂಡ | - |
| 5 | ಹಗ್ಗ ಜಗ್ಗಾಟ (ಮಹಿಳೆಯರು) | ಸುಧಾ ಸಂದೀಪ್ ಮತ್ತು ತಂಡ | - - |
| 6 | ತ್ರೋಬಾಲ್ (ಮಹಿಳೆಯರು) | ಸುಧಾ ಸಂದೀಪ್ ಮತ್ತು ತಂಡ | ಭಾರತಿ ಮತ್ತು ತಂಡ |

ಕ್ರೀಡಾಮಿಲನದ ಎಲ್ಲಾ ವಿಜೇತರಿಗೂ ಅಭಿನಂದನೆಗಳು

## ಜುಲೈ–ಅಕ್ಟೋಬರ್ 2020ರ ಅವಧಿಯ ವಿಶೇಷ ದಿನಗಳು

| | | |
|---|---|---|
| ಜುಲೈ 1, ಬುಧವಾರ | - | ಪ್ರಥಮೈಕಾದಶೀ, ತಪ್ತಮುದ್ರಾಧಾರಣ, ಚಾತುರ್ಮಾಸ್ಯಾರಂಭ |
| ಜುಲೈ 2, ಗುರುವಾರ | - | ಶಾಕ ವ್ರತಾರಂಭ |
| ಜುಲೈ 5, ಭಾನುವಾರ | - | ಹುಣ್ಣಿಮೆ |
| ಜುಲೈ 16, ಗುರುವಾರ | - | ಕರ್ಕಾಟಕ ಸಂಕ್ರಮಣ, ಸರ್ವೈಕಾದಶೀ |
| ಜುಲೈ 20, ಸೋಮವಾರ | - | ಭೀಮನ ಅಮಾವಾಸ್ಯೆ |
| ಜುಲೈ 21, ಮಂಗಳವಾರ | - | ವರ್ಷಋತು, ಶ್ರಾವಣಮಾಸಾರಂಭ |
| ಜುಲೈ 25, ಶನಿವಾರ | - | ನಾಗರ ಪಂಚಮಿ |
| ಜುಲೈ 30, ಗುರುವಾರ | - | ಸರ್ವೈಕಾದಶೀ |
| ಜುಲೈ 31, ಶುಕ್ರವಾರ | - | ವರಮಹಾಲಕ್ಷ್ಮೀವ್ರತ, ದಧಿ ವ್ರತಾರಂಭ |
| ಆಗಸ್ಟ್3, ಸೋಮವಾರ | - | ಹುಣ್ಣಿಮೆ, ಯಜುರ್‌ಪಾಕರ್ಮ |
| ಆಗಸ್ಟ್4, ಮಂಗಳವಾರ | - | ಚಾಂದ್ರ ಋಗುಪಾಕರ್ಮ |
| ಆಗಸ್ಟ್5, ಬುಧವಾರ | - | ಶ್ರೀ ರಾಘವೇಂದ್ರ ಸ್ವಾಮಿಗಳ ಆರಾಧನೆ |
| ಆಗಸ್ಟ್11, ಮಂಗಳವಾರ | - | ಚಾಂದ್ರ ಶ್ರೀ ಕೃಷ್ಣಾಷ್ಟಮೀ |
| ಆಗಸ್ಟ್15, ಶನಿವಾರ | - | ಸರ್ವೈಕಾದಶೀ, ಸ್ವಾತಂತ್ರ್ಯದಿನಾಚರಣೆ |
| ಆಗಸ್ಟ್16, ಭಾನುವಾರ | - | ಸಿಂಹ ಸಂಕ್ರಮಣ |
| ಆಗಸ್ಟ್19, ಬುಧವಾರ | - | ಅಮಾವಾಸ್ಯೆ |
| ಆಗಸ್ಟ್20, ಗುರುವಾರ | - | ಭಾದ್ರಪದ ಮಾಸಾರಂಭ |
| ಆಗಸ್ಟ್21, ಶುಕ್ರವಾರ | - | ಗೌರಿ ತೃತೀಯಾ |
| ಆಗಸ್ಟ್22, ಶನಿವಾರ | - | ಗಣೇಶ ಚತುರ್ಥಿ, ಸಾಮೋಪಕರ್ಮ |
| ಆಗಸ್ಟ್29, ಶನಿವಾರ | - | ಸರ್ವೈಕಾದಶೀ |
| ಆಗಸ್ಟ್30, ಭಾನುವಾರ | - | ಕ್ಷೀರ ವ್ರತಾರಂಭ |
| ಆಗಸ್ಟ್31, ಸೋಮವಾರ | - | ಸೌರ ಋಗುಪಾಕರ್ಮ |
| ಸೆಪ್ಟೆಂಬರ್ 1, ಮಂಗಳವಾರ | - | ಅನಂತ ಚತುರ್ದಶೀ |
| ಸೆಪ್ಟೆಂಬರ್ 2, ಬುಧವಾರ | - | ಹುಣ್ಣಿಮೆ, ಮಹಾಲಯಾರಂಭ |
| ಸೆಪ್ಟೆಂಬರ್ 10, ಗುರುವಾರ | - | ಸೌರ ಕೃಷ್ಣಾಷ್ಟಮೀ |
| ಸೆಪ್ಟೆಂಬರ್ 11, ಶುಕ್ರವಾರ | - | ಶ್ರೀ ಕೃಷ್ಣ ಲೀಲೋತ್ಸವ (ವಿಟ್ಲಪಿಂಡಿ) |
| ಸೆಪ್ಟೆಂಬರ್ 13, ಭಾನುವಾರ | - | ಸರ್ವೈಕಾದಶೀ |
| ಸೆಪ್ಟೆಂಬರ್ 16, ಬುಧವಾರ | - | ಕನ್ಯಾಸಂಕ್ರಮಣ |
| ಸೆಪ್ಟೆಂಬರ್ 17, ಗುರುವಾರ | - | ಮಹಾಲಯ ಅಮಾವಾಸ್ಯೆ |
| ಸೆಪ್ಟೆಂಬರ್ 18, ಶುಕ್ರವಾರ | - | ಅಧಿಕ ಆಶ್ವಯುಜ ಮಾಸ, ಶರದೃತು ಆರಂಭ |
| ಸೆಪ್ಟೆಂಬರ್ 27, ಭಾನುವಾರ | - | ಸರ್ವೈಕಾದಶೀ |
| ಅಕ್ಟೋಬರ್ 1, ಗುರುವಾರ | - | ಹುಣ್ಣಿಮೆ |
| ಅಕ್ಟೋಬರ್ 13, ಮಂಗಳ | - | ಸರ್ವೈಕಾದಶೀ |
| ಅಕ್ಟೋಬರ್ 16, ಶುಕ್ರವಾರ | - | ಅಮಾವಾಸ್ಯೆ |
| ಅಕ್ಟೋಬರ್ 17, ಶನಿವಾರ | - | ತುಲಾ ಸಂಕ್ರಮಣ / ನಿಜ ಆಶ್ವಯುಜ ಮಾಸ, ಹಾಗೂ ನವರಾತ್ರಿ ಆರಂಭ |
| ಅಕ್ಟೋಬರ್ 25, ಭಾನುವಾರ | - | ಮಹಾನವಮೀ, ಆಯುಧ ಪೂಜೆ |
| ಅಕ್ಟೋಬರ್ 26, ಸೋಮ | - | ವಿಜಯದಶಮೀ |
| ಅಕ್ಟೋಬರ್ 27, ಮಂಗಳ | - | ಸರ್ವೈಕಾದಶೀ |
| ಅಕ್ಟೋಬರ್ 28, ಬುಧವಾರ | - | ದ್ವಿದಳ ವ್ರತಾರಂಭ |
| ಅಕ್ಟೋಬರ್ 31, ಶನಿವಾರ | - | ಹುಣ್ಣಿಮೆ |

**(ಆಧಾರ : ಪರ್ಯಾಯ ಉಡುಪಿ ಶ್ರೀ ಪೂರ್ಣಪ್ರಜ್ಞ ಪಂಚಾಂಗಂ)**

### ಅಧಿಕ ಮಾಸ – ನಿರ್ಧಾರ ಹೇಗೆ?

ಇಂಗ್ಲೀಷ್ ಕ್ಯಾಲೆಂಡರ್ ಪ್ರಕಾರ ಸಾಮಾನ್ಯವಾಗಿ ನಾಲ್ಕು ವರ್ಷಕ್ಕೊಮ್ಮೆ ಅಧಿಕ ವರ್ಷ (ಲೀಪ್ ಈಯರ್) ಬರುತ್ತದೆ. ಆದರೆ ಚಾಂದ್ರಮಾನ ಪದ್ಧತಿ ಪ್ರಕಾರ ಸುಮಾರು 3 ವರ್ಷಕ್ಕೆ ಒಂದು ಸಲ ಅಧಿಕ ಮಾಸ ಬರುತ್ತದೆ. ಚಾಂದ್ರಮಾನ ಪದ್ಧತಿ ಯಂತೆ ಪ್ರತಿ ತಿಂಗಳಿಗೆ 29.5 ದಿನಗಳ ಪ್ರಕಾರ ಒಂದು ವರ್ಷಕ್ಕೆ 354 ದಿನಗಳಿರುತ್ತವೆ. ಆದರೆ ಸೌರಮಾನ ಪ್ರಕಾರ ವರ್ಷದಲ್ಲಿ 365 ಅಥವಾ 366 ದಿನಗಳಿದ್ದು, ವ್ಯತ್ಯಾಸವಿರುವ ದಿನಗಳನ್ನು ಸರಿದೂಗಿಸಲು 32.5 ತಿಂಗಳಿಗೊಮ್ಮೆ (ಅಂದರೆ ಎರಡು ವರ್ಷ 8.5 ತಿಂಗಳು) ಅಧಿಕ ಮಾಸವನ್ನು ಆಚರಿಸಲಾಗುತ್ತದೆ.

ಇಂತಹ ಅಧಿಕ ವರ್ಷದಲ್ಲಿ ಯಾವ ಚಾಂದ್ರಮಾನ ತಿಂಗಳಿನಲ್ಲಿ ಸಂಕ್ರಮಣ ಬರುವುದಿಲ್ಲವೋ ಆ ತಿಂಗಳನ್ನು ಅಧಿಕ ಮಾಸ ಎಂದು ನಿರ್ಧರಿಸಲಾಗುತ್ತದೆ.

ಈ ವರ್ಷವನ್ನು ನೋಡುವುದಾದರೆ : 16.9.2020–ಕನ್ಯಾಸಂಕ್ರಮಣ, 17.9.2020–ಅಮಾವಾಸ್ಯೆ, 18.9.2020–ಆಶ್ವಯುಜ ಮಾಸಾರಂಭ, 16.10.2020–ಅಮಾವಾಸ್ಯೆ, ಆಶ್ವಯುಜ ಮಾಸ ಅಂತ್ಯ, 17.10.2020–ತುಲಾ ಸಂಕ್ರಮಣ. ಈ ಆಧಾರದಲ್ಲಿ ಆಶ್ವಯುಜ ಮಾಸ ಅಧಿಕ ಮಾಸವಾಗಿದೆ. ಅಧಿಕ ಮಾಸದಲ್ಲಿ ಜಪ, ತಪ, ದಾನಾದಿಗಳನ್ನು ಮಾಡಿದರೆ ಅಧಿಕ ಫಲ. ಆದರೆ ವಿಶೇಷ ದಿನಗಳನ್ನು ಅಧಿಕ ಮಾಸದಲ್ಲಿ ಆಚರ್ಸಿದೆ ನಿಜ ಮಾಸದಲ್ಲಿ ಆಚರಿಸಲಾಗುತ್ತದೆ. ಉದಾಹರಣೆಗೆ ನವರಾತ್ರಿ ನಿಜ ಆಶ್ವಯುಜ ಪಾಡ್ಯದಿಂದ ಆರಂಭವಾಗುತ್ತದೆ.

# ಯುವ ವಿಭಾಗದಿಂದ ''ಮಧುರ ಗಾನ'' ಆನ್‌ಲೈನ್ ಸ್ಪರ್ಧೆ



**ಜನಸಮುದಾಯವು ಕೊರೋನಾ ಮಹಾಮಾರಿಯ ಭಯಾನಕ ಆರ್ಭಟದಿಂದ ಮಾನಸಿಕವಾಗಿ ತತ್ತರಿಸಿ ಹೋಗಿ, ಲಾಕ್‌ಡೌನ್‌ನ ಅನಿವಾರ್ಯತೆಯನ್ನು ಅನುಭವಿಸುತ್ತಿದ್ದಾಗ, ಯುವ ವಿಭಾಗವು ಪರಿಕಲ್ಪಿಸಿ ಸಂಯೋಜಿಸಿದ ಮಧುರಗಾನ ಆನ್-ಲೈನ್ ಸಂಗೀತ ಸ್ಪರ್ಧೆ ಬಳಗದ ಸದಸ್ಯರಿಗೆ ತುಸು ಸಮಾಧಾನ ನೀಡಿದೆ. ಈ ಸ್ಪರ್ಧೆಯ ವಿವರಗಳನ್ನು ಸೊಗಸಾಗಿ ನಿಮ್ಮ ಮುಂದೆ ಪ್ರಸ್ತುತಪಡಿಸಿದ್ದಾರೆ – ಅನುಭವೀ ಬರಹಗಾರರಾದ ಶ್ರೀಮತಿ ಸುಜಾತ ರಮೇಶ್‌ವರು – ಸಂ**

2020ರ ಆರಂಭದಲ್ಲಿ ಭಾರತಕ್ಕೆ ಅಪ್ಪಳಿಸಿದ ಕೊರೊನಾ ವೈರಸ್ ತನ್ನ ಕಭಂದ ಬಾಹುಗಳನ್ನು ಹರಡಿ ಜನಜೀವನವನ್ನು ಸಂಪೂರ್ಣ ಅಸ್ತವ್ಯಸ್ತಗೊಳಿಸಿ ಎಲ್ಲರೆದೆಯಲ್ಲಿ ತೀವ್ರವಾದ ಆತಂಕ ಸೃಷ್ಟಿಸಿತ್ತು. ರಾಷ್ಟ್ರದ ಜನತೆ ಮನೆಯಲ್ಲಿ ದಿಗ್ಬಂಧನಕ್ಕೆ ಒಳಗಾಗಿದ್ದರು. ಜೀವನ ನೀರಸವಾಗಿ ಸಾಗಿತ್ತು. ಇಂತಹ ಒಂದು ಪರಿಸ್ಥಿತಿಯಲ್ಲಿ, ಆನಂದ ಬಳಗದ ಯುವ ವಿಭಾಗದ ಸದಸ್ಯರಲ್ಲಿ ಹುರುಪು ಮೂಡಿಸಲು ಹಾಗೂ ಅವರಲ್ಲಿ ಸುಪ್ತವಾಗಿದ್ದ ಪ್ರತಿಭೆಯನ್ನು ಗುರುತಿಸಲು, ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡರು. ವಿಶೇಷವೆಂದರೆ ಈ ಎಲ್ಲ ಕಾರ್ಯಕ್ರಮಗಳನ್ನು ಆನ್‌ಲೈನ್ ಮುಖಾಂತರ ವ್ಯಾಟ್ಸ್ ಆ್ಯಪ್‌ನಲ್ಲಿ ನಡೆಸಲಾಯಿತು. ಸದಸ್ಯರು ಯಾರೂ ಪರಸ್ಪರ ಭೇಟಿಯಾಗದೆ, ಕೇವಲ ತಮ್ಮ ಆಧುನಿಕ ತಂತ್ರಜ್ಞಾನದ ಮೊಬೈಲ್ ಫೋನ್ ಬಳಸಿ ಮನೆಯಲ್ಲಿ ಕುಳಿತು ಭಾಗಿಯಾಗುವ ಸ್ಪರ್ಧೆಯನ್ನು ಯುವ ವಿಭಾಗದ ಸದಸ್ಯರು ರೂಪಿಸಿದರು.

ಈ ಕಾರ್ಯಕ್ರಮಗಳಲ್ಲಿ ಮಧುರ ಗಾನ ಎಂಬ ಸಂಗೀತ ಸ್ಪರ್ಧೆಯನ್ನು ವಿಶಿಷ್ಟವಾಗಿ ಆಯೋಜಿಸಿದ್ದರು. ವಿಭಿನ್ನ ರೀತಿಯ ಈ ಸ್ಪರ್ಧೆಯಲ್ಲಿ ಹಾಡುಗಾರರನ್ನು ಪರಿಚಯಿಸುವ ಉದ್ದೇಶದಿಂದ, ವೀಡಿಯೋ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಭಾವಗೀತೆ, ಭಕ್ತಿ ಗೀತೆ, ಜನಪದ ಗೀತೆ ಹಾಗೂ ಚಿತ್ರ ಗೀತೆಗಳನ್ನು, ಕನ್ನಡ, ಹಿಂದಿ, ತುಳು ಮತ್ತು ಇಂಗ್ಲಿಷ್ ಭಾಷೆಯಲ್ಲಿ ಹಾಡಲು ಅವಕಾಶ ಇತ್ತು. ವಯಸ್ಸಿನ ಅಂತರವಿಲ್ಲದೆ ಹಿರಿಕಿರಿಯರೆಲ್ಲರಿಗೆ ಮುಕ್ತವಾಗಿ ಹಾಡಲು ಒಂದು ಸುವರ್ಣಾವಕಾಶವಿತ್ತು ಇಲ್ಲಿ. ಯುವ ವಿಭಾಗದ ಸದಸ್ಯರು ಹಾಗೂ ಅವರ ಕುಟುಂಬದವರಿಗೆ ಈ ಸ್ಪರ್ಧೆ ಸೀಮಿತವಾಗಿತ್ತು.

ಆಸಕ್ತ ಸದಸ್ಯರು ತಾವು ಹಾಡುತ್ತಿರುವ ವೀಡಿಯೋ ಚಿತ್ರಣವನ್ನು ಯುವ ವಿಭಾಗದ ವ್ಯಾಟ್ಸ್ ಆ್ಯಪ್ ನಂಬರಿಗೆ ಕಳುಹಿಸಿ ಸ್ಪರ್ಧೆಯಲ್ಲಿ ಭಾಗವಹಿಸಲು ಅವಕಾಶ ಏರ್ಪಡಿಸಲಾಗಿತ್ತು. ಮೇ 17 ರಂದು ಬೆಳಿಗ್ಗೆ 9 ಗಂಟೆಗೆ ಆರಂಭವಾದ ಈ ಸ್ಪರ್ಧೆ ಮೇ 24 ರಾತ್ರಿ 9 ಗಂಟೆಗೆ ಮುಕ್ತಾಯಗೊಂಡಿತು.

ಸಂಗೀತದಲ್ಲಿ ಆಸಕ್ತ ಸದಸ್ಯರು, ಈಗ ಲಭ್ಯವಿರುವ ತಂತ್ರಜ್ಞಾನದ ಸದುಪಯೋಗ ಪಡೆದು, ತಮ್ಮ ತಮ್ಮ ಹಾಡಿನ ಮೂಲಕ ಸ್ಪರ್ಧೆಯಲ್ಲಿ ಭಾಗವಹಿಸಿದರು. ಹಿರಿಯರು ಕಿರಿಯರು ಎಲ್ಲರೂ ತುಂಬು ಮನಸ್ಸಿನಿಂದ, ಯಾವ ಅಳುಕೂ ಇಲ್ಲದೆ, ಅತ್ಯಂತ ಹುಮ್ಮಸ್ಸಿನಿಂದ ಹಾಡಿರುವುದು ಈ ಸ್ಪರ್ಧೆಯ ವಿಶೇಷತೆ. 1960 ರಂದು 2019 ರ ವರೆಗಿನ ಚಿತ್ರ ಗೀತೆಗಳು, ಜನಪದ ಗೀತೆಗಳು, ಭಾವ ಗೀತೆಗಳು ಹಾಗೂ ಭಕ್ತಿ ಗೀತೆಗಳ ದಂಡು ಸಾಲು ಸಾಲಾಗಿ, ಸದಸ್ಯರ ಕಂಠದಲ್ಲಿ ಮೂಡಿ ಬಂತು, ಕೇಳುಗರ ಮನ ಗೆದ್ದಿತು, ಪ್ರಶಂಸೆಗಳ ಮಹಾಪೂರವೇ ಹರಿದು ಬಂತು. ಒಟ್ಟಿನಲ್ಲಿ ಇದೊಂದು ಅತ್ಯಂತ ಅದ್ಭುತ ಯಶಸ್ವಿ ಕಾರ್ಯಕ್ರಮ. ವಸಂತದ ಋತುವಿನ ಈ ಸುಸಮಯದಲ್ಲಿ, ಕೋಗಿಲೆಗಳ ಗಾನದೋಪಾದಿಯಲ್ಲಿ, ಈ ಹಾಡುಗಳು, ಎಲ್ಲರ ಮನೆ, ಮನವನ್ನು ರಂಜಿಸಿತು. ''ಲಾಕ್ ಡೌನ್ ಪೀರಿಯಡ್‌ನಲ್ಲಿ ಕಲಿಯುವ ಹಾಗೂ ಕಲಿತ ವಿದ್ಯೆಯನ್ನು ಶಾರ್‌ಪೆನ್ ಗೊಳಿಸುವ ಅವಕಾಶ ಈ ಸ್ಪರ್ಧೆಯಲ್ಲಿ ಎಲ್ಲರಿಗೂ ಲಭ್ಯವಾಗಿ, ಈ ಕಾರ್ಯಕ್ರಮ ಉತ್ತಮವಾಗಿ ಮೂಡಿ ಬಂದಿದೆ'' ಎನ್ನುವ ಪ್ರಶಂಸೆ ವ್ಯಕ್ತಪಡಿಸಿದರು ಸ್ಪರ್ಧಾಳುವಾದ ಶ್ರೀ ಚೇತನ್ ಎಮ್. ರಾವ್.

ಹಿರಿಕಿರಿಯರೆನ್ನದೆ ಅನೇಕ ಸದಸ್ಯರು ಅತ್ಯಂತ ಉತ್ಸಾಹದಿಂದ ಭಾಗವಹಿಸಿದ, ಆನಂಬ ಬಳಗ, ಯುವ ವಿಭಾಗದ ಪ್ರಪ್ರಥಮ ಆನ್‌ಲೈನ್ ಸಂಗೀತ ಸ್ಪರ್ಧೆ ಇದು.ಈ ಸ್ಪರ್ಧೆಯನ್ನು ಆಯೋಜಿಸಿ, ಯಶಸ್ವಿಯಾದ ಕೀರ್ತಿ ಯುವ ವಿಭಾಗದ ಸಂಚಾಲಕರು ಮತ್ತು ತಂಡದವರಿಗೆ. ಸಂಚಾಲಕರಾದ ಶ್ರೀ ಗೋಪಾಲಕೃಷ್ಣ ಕುಂಜತ್ತಾಯರವರ ಅಭಿಪ್ರಾಯದಂತೆ ಕೊರೊನಾದಿಂದಾಗಿ ಈಗ ಮನೆಯಲ್ಲಿಯೇ

ಇರುವ ಸದಸ್ಯರಲ್ಲಿರುವ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸಿ ಬೇಕೆನ್ನುವ ಉದ್ದೇಶವೇ ಈ ಸ್ಪರ್ಧೆಗೆ ನಾಂದಿಯಾಯಿತು. ಸುಪ್ರವಾದ ಸಂಗೀತ ಪ್ರೇಮ ಹೊರಬರಲು ಈ ವೇದಿಕೆ ಕಾರಣವಾಯಿತು. ಸ್ಪರ್ಧಾತ್ಮಕ ಮನೋಭಾವ ಹಾಡುಗಾರರ ಕಂಠದಲ್ಲಿ ಚೈತನ್ಯ ತುಂಬಿತು. ಕಾರ್ಯಕ್ರಮದ ಯಶಸ್ಸಿನಿಂದ ಎಲ್ಲರಿಗೂ ಸಂತೋಷವಾಗಿದೆ ಹಾಗೂ ಮುಂದೆ ಇಂತಹ ವಿಭಿನ್ನ ರೀತಿಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಬಳಗದ ಸದಸ್ಯರಿಗೆ ಸ್ಫೂರ್ತಿ ತುಂಬಿದೆ. ಮುಂದಿನ ದಿನಗಳಲ್ಲಿ ಸದಸ್ಯರ ಸಹಕಾರದಿಂದ ಇಂತಹ ಅನೇಕ ಸ್ಫೂರ್ತಿದಾಯಕ ಕಾರ್ಯಕ್ರಮಗಳು ಆನಂದ ಬಳಗದ ಸರ್ವ ಸದಸ್ಯರಿಗೆ ನಡೆಯಲಿದೆ ಎನ್ನುವ ಭರವಸೆಯ ನುಡಿಯಲ್ಲಿ ತಮ್ಮ ಸಂತೋಷ ವ್ಯಕ್ತಪಡಿಸಿದ್ದಾರೆ ಶ್ರೀ ಗೋಪಾಲಕೃಷ್ಣ ಕುಂಜತ್ತಾಯರು.

ಈ ಸ್ಪರ್ಧೆಯಲ್ಲಿ ಅಂಕಿತ್ ಭಟ್, ಮಟ್ಟಿ ರಾಮಚಂದ್ರ ರಾವ್, ವಿನ್ಯಾಸ್ ಮೂರ್ತಿ, ಸುಜಾತ ರಮೇಶ್, ಗೋಪಾಲಕೃಷ್ಣ ಕುಂಜತ್ತಾಯ, ಕಿರಣ್ ಕೆ.ಎಸ್. ದೀಪಕ್ ರಾವ್, ಪ್ರದ್ಯುಮ್ನ ಭಟ್, ಮಧೂಸೂದನ್ ಕಾವೂರ್, ಸಿರಿ ಕಲ್ಮಾಡಿ, ಅದಿತಿ ದೇವಿ ಪ್ರಸಾದ್, ಶಾಶ್ವತ್, ಸುಚಿತ್ರ ದೇವಿ ಪ್ರಸಾದ್, ಯಂ. ಕೆ. ಪ್ರಸಾದ್, ಸನ್ನಿಧಿ, ಗುರುಮೂರ್ತಿ, ಮಹತಿ, ದೀಕ್ಷಾ ಆಚಾರ್ಯ, ನೇಹಾ ಕುಬಣೂರ್, ದೀಕ್ಷಾ ಭಟ್, ವಂದನಾ ಮೂರ್ತಿ, ಬಾಲಚಂದ್ರ ತೊಲ್ಪಾಡಿ, ದೇವಿ ಪ್ರಸಾದ್, ಪ್ರಕಾಶ್ ಭಟ್, ಪ್ರಣಮ್ಯ, ರಾಜೇಶ್ ರಾವ್, ಚೇತನ್, ರಾಧಾಕೃಷ್ಣ, ಲಕ್ಷ್ಮಿ ರಾಜೇಶ್, ಅಮಿತ ಡಿ ರಾವ್, ರಾಘವೇಂದ್ರ ರಾವ್, ಸೌಮ್ಯರಾವ್, ಪರಿಮಳ ಆಚಾರ್ಯ, ಗುರುನಂದನ್, ಡಾ. ಡಿ.ಕೆ. ಶ್ರೀನಿವಾಸ ರಾವ್, ಶರಣ್ಯ ನಂದನ್ ರಾವ್ ಮತ್ತು ಶ್ರೀಮತಿ ರತ್ನ ರಾವ್ ಇವರೆಲ್ಲರು ಭಾಗವಹಿಸಿ ಮಧುರ ಗಾನಕ್ಕೆ ಮೆರುಗನ್ನು ತಂದು ಕೊಟ್ಟರು.

''ಇದೊಂದು ಒಳ್ಳೆಯ ಪ್ರಯತ್ನ. ಹೊಸ ಎಕ್ಸ್‌ಪೀರಿಯನ್ಸ್, ಸಂಗೀತ ಕಲಿಯದವರಿಗೂ ಹಾಡಲು ಅವಕಾಶ ಸಿಕ್ಕಿತು ಈ ಸ್ಪರ್ಧೆಯಲ್ಲಿ'' ಎನ್ನುವ ಅಭಿಪ್ರಾಯವನ್ನು ಭಾವಗೀತೆ ವಿಭಾಗದಲ್ಲಿ ಪ್ರಥಮ ಬಹುಮಾನ ಪಡೆದ ಶ್ರೀಮತಿ ವಂದನಾ ಮೂರ್ತಿಯನ್ನು ವ್ಯಕ್ತಪಡಿಸಿದ್ದಾರೆ. ಒಟ್ಟಿನಲ್ಲಿ ''ಮಧುರ ಗಾನ'' ಸಂಗೀತ ಸ್ಪರ್ಧೆ ಸುಂದರವಾಗಿ ಮೂಡಿ ಬಂತು. ಪ್ರತಿಯೊಬ್ಬರಲ್ಲೂ ಸುಪ್ತವಾಗಿದ್ದ ಕಲೆ ಈ ವೇದಿಕೆಯ ಮೂಲಕ ಬೆಳಕಿಗೆ ಬಂದಿದೆ. 5 ವರ್ಷದ ಮಹತಿ ಅತ್ಯಂತ ಕಿರಿಯ ಸ್ಪರ್ಧಿಯಾದರೆ, ಶ್ರೀ ಡಾ. ಶ್ರೀನಿವಾಸ ರಾವ್ ಮತ್ತು ಶ್ರೀಮತಿ ರತ್ನ ಹಿರಿಯ ಸ್ಪರ್ಧಿಗಳಾಗಿ ''ಮಧುರ ಗಾನ'' ಸ್ಪರ್ಧೆಯನ್ನು ವೈವಿಧ್ಯಮಯವಾಗಿಸಿದರು. ಮುಂದೆಯೂ ಯುವ ವಿಭಾಗದ ಸದಸ್ಯರಿಂದ ಇಂತಹ ಅನೇಕ ಚಟುವಟಿಕೆಗಳು ಬಳಗದ ಸದಸ್ಯರಿಗೆ ಲಭ್ಯವಾಗಲಿ. ಜಗತ್ತು ಕೊರೊನ ಮುಕ್ತವಾಗಿ, ಆನಂದ ಬಳಗದ ಸದಸ್ಯರೆಲ್ಲರು ಮತ್ತೆ ಮುಕ್ತವಾಗಿ ಬೆರೆತು ಆನಂದ ಪಡುವಂತೆ ಶ್ರೀ ಕೃಷ್ಣ ದೇವರು ಅನುಗ್ರಹಿಸಲಿ ಎನ್ನುವುದು ನಮ್ಮೆಲ್ಲರ ಆಶಯ, ಪ್ರಾರ್ಥನೆ.

**ಸ್ಪರ್ಧೆಯಲ್ಲಿ ವಿಜೇತರು**

**ವಯಸ್ಕರ ವಿಭಾಗ**

**ಚಿತ್ರ ಗೀತೆ :**

ಶ್ರೀಮತಿ ಸುಚಿತ್ರಾ ದೇವಿ ಪ್ರಸಾದ್ - ಪ್ರಥಮ ಬಹುಮಾನ
ಶ್ರೀಮತಿ ಸುಜಾತ ರಮೇಶ್ - ದ್ವಿತೀಯ ಬಹುಮಾನ

**ದೇವರ ನಾಮ :**

ಶ್ರೀಮತಿ ಶರಣ್ಯ ನಂದನ್ ರಾವ್ - ಪ್ರಥಮ ಬಹುಮಾನ
ಶ್ರೀ ವಿನ್ಯಾಸ್ ಮೂರ್ತಿ - ದ್ವಿತೀಯ ಬಹುಮಾನ

**ಜನಪದ ಗೀತೆ**

ಶ್ರೀಮತಿ ಪರಿಮಳ ಆಚಾರ್ಯ - ಪ್ರಥಮ ಬಹುಮಾನ

**ಭಾವಗೀತೆ**

ಶ್ರೀಮತಿ ವಂದನಾ ಮೂರ್ತಿ - ಪ್ರಥಮ ಬಹುಮಾ
ಶ್ರೀ ಮಧುಸೂದನ ಕಾವೂರ್ - ದ್ವಿತೀಯ ಬಹುಮಾನ

**ಮಕ್ಕಳ ವಿಭಾಗ**

**ಚಿತ್ರಗೀತೆ :**

ಮಾಸ್ಟರ್ ಶಾಶ್ವತ್ - ಪ್ರಥಮ ಬಹುಮಾನ
ಕುಮಾರಿ ಮಹತಿ ಬಿ.ಎಮ್. ದ್ವಿತೀಯ ಬಹುಮಾನ

**ದೇವರ ನಾಮ**

ಕುಮಾರಿ ನೇಹ ಕುಬಣೂರ್ - ಪ್ರಥಮ ಬಹುಮಾನ
ಕುಮಾರಿ ಅದಿತಿ ದೇವಿ ಪ್ರಸಾದ್ - ದ್ವಿತೀಯ ಬಹುಮಾನ

**ಜನಪದ ಗೀತೆ**

ಸಿರಿ ಕಲ್ಮಾಡಿ - ಪ್ರಥಮ ಬಹುಮಾನ
ಸನ್ನಿಧಿ - ದ್ವಿತೀಯ ಬಹುಮಾನ

**ಅಭಿನಂದನಾ ಪುರಸ್ಕಾರ**

ಹಿರಿಯರಾದ
ಶ್ರೀ ಡಾ. ಶ್ರೀನಿವಾಸ ರಾವ್ ಮತ್ತು ಶ್ರೀಮತಿ ರತ್ನ ರಾವ್.

# ಲಾಕ್‌ಡ್‌ನ್ ಕಾಲದಲ್ಲಿ ನೂತನ ಪರಿಕಲ್ಪನೆ – ಫೋಟೋಗ್ರಫಿ ಸ್ಪರ್ಧೆ

ಆನಂದ ಬಳಗದ ಯುವ ವಿಭಾಗದ ಪರಿಕಲ್ಪನೆಯಲ್ಲಿ ಮೂಡಿಬಂದ ಈ ನೂತನ ಪ್ರಯೋಗ ಎಲ್ಲರಿಗೂ ಖುಷಿ ನೀಡಿದೆ. ಇದರ ಹಿನ್ನೆಲೆ ಮತ್ತು ವಿವರಗಳನ್ನು ರಸವತ್ತಾಗಿ ಪ್ರಸ್ತುತಪಡಿಸಿದ್ದಾರೆ.
**ಡಾ. ಕೆ.ಎನ್. ಅಡಿಗ, ಅಡೂರು–ಸಂ**



ಎಲ್ಲರೂ ಅವರವರ ಕೆಲಸದಲ್ಲಿದ್ದಾಗ ಕರೋನಾ ಎಂಬ ಪಿಡುಗು ವಿಶ್ವವನ್ನೇ ಆಕ್ರಮಿಸಿ ಚಿಂತೆಗೀಡುಮಾಡಿದ್ದಲ್ಲದೆ ಜೀವಕ್ಕೆ ಹಾಗೂ ಜೀವನಕ್ಕೂ ತೊಂದರೆ ಬಂತು. ದೇಶಕ್ಕೆ ಲಾಕ್ಡೌನ್ ಆಗಿ ಜನರ ನಿತ್ಯಕೆಲಸಗಳಿಗೂ ತೊಂದರೆ. ಮುಂದೇನು ಎಂಬ ಯೋಚನೆ ಕಾಡತೊಡಗಿತು. ಮೋದಿ ಸರ್ಕಾರದ ದಿಟ್ಟ ನಿಲುವಿನಿಂದಾಗಿ ದೇಶದ ಜನತೆಗೆ ಕಷ್ಟವಾದರೂ ಕರೋನ ತಡೆಗಟ್ಟುವಲ್ಲಿ ದಿಟ್ಟಹೆಜ್ಜೆ ಇರಿಸಿದರು.

ಇದರಿಂದಾಗಿ ಜೀವನ, ಜೀವನಕ್ಕೂ ಜೀವಕ್ಕೂ ಸಂಪಾದನೆಗೂ ಉದ್ಯೋಗಕ್ಕೂ ತೊಂದರೆಯಾಗಿತ್ತು. ಯಾರು ಯಾರನ್ನು ಭೇಟಿಯಾಗುವ ಹಾಗಿಲ್ಲ ಸಾಮಾಜಿಕ ಧಾರ್ಮಿಕ ಸಾಂಸ್ಕೃತಿಕ ಕಾರ್ಯಕ್ರಮದ ಆಯೋಜನೆಗೆ ತೊಂದರೆಯಾಯಿತು. ಎಲ್ಲಾ ಕಾರ್ಯಕ್ರಮಗಳು ರದ್ದು ಆದವು.

ಈ ವಿಷಯ ಬಂದಾಗ ನಮಗೆ ನಮ್ಮ ಆನಂದ ಬಳಗದ ಕಾರ್ಯಚಟುವಟಿಕೆಗಳ ಬಗ್ಗೆ ಯೋಚಿಸಿದಾಗ ಸಾಮಾಜಿಕ ಅಂತರ ಕಾಯ್ದುಕೊಳ್ಳುವ ವಿಚಾರ ಬಂದಾಗ ಮೊದಲ ಕಾರ್ಯಕ್ರಮವಾದ ವಸಂತೋತ್ಸವ ಕಾರ್ಯಕ್ರಮವನ್ನು ಸ್ಥಗಿತಗೊಳಿಸಬೇಕಾಯಿತು.

ಈ ಸಮಯದಲ್ಲಿ ಯುವವಿಭಾಗದ ನಿಕಟಪೂರ್ವ ಸಂಚಾಲಕರಾದ ಶ್ರೀ ಕೃಷ್ಣಪ್ರಸಾದ್ ಈ ಸಮಯದಲ್ಲಿ ಸುಮ್ಮನೆ ಸಮಯ ಕಳೆಯು ವುದಕ್ಕಿಂತ ಉತ್ತಮ ಚಿಂತನೆಗೆ ಅವಕಾಶ ಹೇಗೆ ಕೊಡ ಬಹುದೆಂಬ ಯೋಚನೆಯಲ್ಲಿ ಛಾಯಾ ಚಿತ್ರಸ್ಪರ್ಧೆ ಮಾಡ ಬೇಕೆಂದು ಬಯಸಿ ದರು. ಅದನ್ನು ಕಾರ್ಯ ರೂಪಕ್ಕೆ ತಂದವರು ಯುವ ವಿಭಾಗದ ಈಗಿನ ಸಂಚಾಲಕ ರಾದ ಶ್ರೀ ಗೋಪಾಲ ಕೃಷ್ಣ ಕುಂಜ ತ್ತಾಯ ಹಾಗೂ ತಂಡ ದವರು.


ಕೆ. ಗೋಪಾಲಕೃಷ್ಣ ಸ್ತ್ರೀವೇಷಕ್ಕೆ ತಯಾರಿ


ಆನಂದ ಬಳಗದ ಯುವ ವಿಭಾಗದ ವಾಟ್ಸಪ್ ಗ್ರೂಪ್ ಅಲ್ಲಿ ಇದನ್ನ ಪ್ರಕಟಿಸಲಾಯಿತು. ಒಳ್ಳೇ ಪ್ರತಿಕ್ರಿಯೆ ಬಂತು ಹಾಗೂ ಅದಕ್ಕೆ ಕೆಲವು ನಿಯಮ ಗಳನ್ನು ಮಾಡಲಾಯಿತು. ಒಬ್ಬ ಸದಸ್ಯ 5 ಛಾಯಾಚಿತ್ರ ಗಳನ್ನು ಕಳುಹಿಸಬಹುದು. ಅದರಲ್ಲಿ ಹಳೆಯ ಬಾಲ್ಯದ ನೆನಪಿನ ಛಾಯಾಚಿತ್ರ, ತಮ್ಮ ಜೀವನದ ನೆನಪಿನ ಛಾಯಾಚಿತ್ರ, ಕುಟುಂಬದವರೊಂದಿಗೆ ತೆಗೆದ ಛಾಯಾಚಿತ್ರ, ಜೀವನದ ಒಂದು ಸನ್ನಿವೇಶವನ್ನು ತೋರಿಸುವ ಚಿತ್ರ, ಜೀವನದಲ್ಲಿ ನೆನಪಿನಲ್ಲಿ ಉಳಿಯುವ ಚಿತ್ರ ಹಾಗೂ ಕೋರೋನ ಸಮಯದಲ್ಲಿ ತೆಗೆದ ಚಿತ್ರ ಇದರ ಬಗ್ಗೆ ಛಾಯಾಚಿತ್ರವನ್ನು ಸ್ಪರ್ಧೆಗೆ ಕಳುಹಿಸ ಬೇಕಾಯಿತು. ಇದಕ್ಕೆ ಸಮಯ ಏಪ್ರಿಲ್ 24 ರಿಂದ 28ರ ತನಕ ನೀಡ ಲಾಯಿತು.

ಸದಸ್ಯರಿಗೆ ತಮ್ಮ ಜೀವನದ ಛಾಯಾಚಿತ್ರವನ್ನು ಅರಸಲು ಅವಕಾಶ ಮಾಡಿಕೊಟ್ಟಿತು. ಎಲ್ಲೋ ಇದ್ದ ಆಲ್ಬಮ್ ಎದುರಿಗೆ ಬಂತು. ಛಾಯಾ ಚಿತ್ರ ಅಣಿಯಾಯಿತು ಹಾಗೂ ಸ್ಪರ್ಧೆಗೆ ಫೋಟೋಗಳನ್ನು ಕಳಿಸಿಕೊಟ್ಟರು. ಯುವವಿಭಾಗದ ಸದಸ್ಯರು ಕಳುಹಿಸಿದ ಫೋಟೋದಲ್ಲಿ ವೈಯಕ್ತಿಕ ಚಿತ್ರ ಆಯ್ಕೆ ಮಾಡಿದಾಗ ಬಾಲ್ಯದ ಚಿತ್ರಕ್ಕಾಗಿ ಶ್ರೀ ರಂಜಿತ್ ಎಡಪಡಿತ್ತಾಯ, ಹಾಸ್ಯದ ಚಿತ್ರಕ್ಕಾಗಿ ಶ್ರೀ ಮಟ್ಟಿರಾಮಚಂದ್ರರಾವ್, ನಾಟಕದ ಚಿತ್ರಕ್ಕಾಗಿ ಶ್ರೀ ರಘುವೀರ್, ಸಾಂಸಾರಿಕ ಚಿತ್ರಕ್ಕಾಗಿ ಶ್ರೀ ಪ್ರಕಾಶ್ ಭಟ್ ಕರೋನ ದಿನದ ಸಾಂಸಾರಿಕ ಚಿತ್ರಕ್ಕೆ ಶ್ರೀ ದಿನೇಶ್‌ರಾವ್, ಯುವಸುಂದರ ಹುಡುಗಿಯ ಚಿತ್ರ ಕ್ಕಾಗಿ ಶ್ರೀಮತಿ ವಿಮಲ ಜಯ ರಾಮ್, ಯುವ ಸುಂದರ ಚಿತ್ರಕ್ಕಾಗಿ ಪಿ.ಸಿ. ರಾವ್ ಆಯ್ಕೆಯಾದರು. ಎಲ್ಲರಿಗೂ ಅಭಿನಂದನೆಗಳು.


ರಘುವೀರ್ ತುಳುನಾಟಕದ ಸ್ತ್ರೀಪಾತ್ರದಲ್ಲಿ



ಸುಜಾತ ರಮೇಶ್ ದೇವಿ ಮಹಾತ್ಮೆ ಯಕ್ಷಗಾನದ ಶ್ರೀ ದೇವಿಯಾಗಿ



ಕಿರಣ್ ಕೆ.ಎಸ್. ಅವರಿಂದ ದೇವರ ಬಲಿ



ಮಟ್ಟಿ ರಾಮಚಂದ್ರ ರಾಯರ ಕೋವಿಡ್ ಸ್ಪೆಷಲ್ ಅವತಾರ



ಮಧುಸೂದನ್ ಕಾವೂರು ಮದುವೆ ದಿಬ್ಬಣದ ಮ್ಯಾನೇಜ್‌ಮೆಂಟ್

ಒಟ್ಟಾರೆ ಒಬ್ಬರು ಕಳುಹಿಸಿದ ಎಲ್ಲಾ ಛಾಯಾ ಚಿತ್ರಕ್ಕಾಗಿ ಮೊದಲ ಬಹುಮಾನ ಶ್ರೀ ಕಿರಣ್, ದ್ವಿತೀಯ ಬಹುಮಾನ ಶ್ರೀಮತಿ ಸುಜಾತ ರಮೇಶ್, ತೃತೀಯ ಬಹುಮಾನ ಶ್ರೀಮತಿ ನವನೀತ್ ಇವರುಗಳು ಆಯ್ಕೆಯಾದರು. ಸಮಾಧಾನಕರ ಬಹುಮಾನದಲ್ಲಿ ಶ್ರೀ ಮಧುಸೂದನ ಕಾವೂರು ಹಾಗೂ ಶ್ರೀಮತಿ ಸುಪ್ರಿಯಾ ಆಯ್ಕೆಯಾದರು.

ಇದೊಂದು ಉತ್ತಮ ಪ್ರಯೋಗವಾಗಿದ್ದು ಛಾಯಾಚಿತ್ರದ ಬಗ್ಗೆ ಹೊಸ ಆಸಕ್ತಿ ಹುಟ್ಟಲು ಕಾರಣವಾಯಿತು.

ಇದಾದ ಬಳಿಕ ಯುವವಿಭಾಗ ಇಂಥ ಹಲವು ಸ್ಪರ್ಧೆಗಳನ್ನು ಮಾಡಬೇಕೆಂದು ತೀರ್ಮಾನಿಸಿತು.

ಈ ಸ್ಪರ್ಧೆಯ ಬಗ್ಗೆ ವಿಜೇತರಾದ ಶ್ರೀ ದಿನೇಶ್‌ರಾವ್ ಅವರನ್ನು ಸಂಪರ್ಕಿಸಿದಾಗ ನಮ್ಮ ಛಾಯಾ ಚಿತ್ರವನ್ನು ಬಳಗದ ಸದಸ್ಯರಿಗೆ ಪ್ರದರ್ಶಿಸಿದಾಗ ನಮ್ಮ ಬಳಗದ ನಂಟು ಜಾಸ್ತಿ ಯಾಯಿತು ಹಾಗೆ ಕರೋನ ಸಮಯ ವನ್ನು ಸರಿಯಾಗಿ ಉಪಯೋಗಿಸಲಾಯಿತು ಎಂದು ತಿಳಿಸಿದರು.

ಹಾಗೆ ಇನ್ನೊಬ್ಬ ಸ್ಪರ್ಧಿ ಶ್ರೀಮತಿ ಸುಜಾತಾರಮೇಶ್ ಅವರನ್ನು ಸಂಪರ್ಕಿಸಿದಾಗ ಅವರ ಮಾತು ಜೀವನದ ಅಂಗಳದಲ್ಲಿ ಮನಸ್ಸನ್ನು ತಿಳಿಗೊಳಿಸಿ, ಅಲ್ಲೆಲ್ಲಾ ಹರಡಿ ಬಾಲ್ಯ, ಯೌವನ, ಸಾಂಸಾರಿಕ ಜೀವನ, ಹಾಗೂ ಪ್ರೀತಿಯ ಹವ್ಯಾಸಗಳ ಮಧುರಕ್ಷಣಗಳನ್ನು ಮೆಲುಕು ಹಾಕುವಂತೆ ಮಾಡಿತು ಈ ಸುಂದರ ಚಿತ್ರಸ್ಪರ್ಧೆ ಎಂದು ತಿಳಿಸಿದರು.

ಜೀವ ಜೀವನದ ಮಧ್ಯೆ ಬಂದ ಕೊರೋನಾ ತುಂಬಾ ವಿಷಮ ಸ್ಥಿತಿಯಲ್ಲಿ ನಿಲ್ಲಿಸಿದೆ. ಆನಂದ ಬಳಗದ ನಮ್ಮೆಲ್ಲರನ್ನು ಅಂತರದಲ್ಲಿ ನಿಲ್ಲಿಸಿದೆ. ಎಲ್ಲವೂ ಸಹಜ ಸ್ಥಿತಿಗೆ ಆದಷ್ಟು ಬೇಗ ಮರಳುವಂತಾಗಲಿ. ಇದೇ ನಮ್ಮೆಲ್ಲರ ಮನದಾಸೆ. ಭಗವಂತನಲ್ಲಿ ಪ್ರಾರ್ಥನೆ.


## ಫಾರಂ 4 (ನಿಯಮ 8 ರಂತೆ)

**ಭೃಗುವಾಣಿ ಕನ್ನಡ ತ್ರೈಮಾಸಿಕ ಪತ್ರಿಕೆಯ ಮಾಲಿಕತ್ವ ಮತ್ತು ಇತರ ವಿವರಗಳು**

| | | |
|---|---|---|
| ಪ್ರಕಟಣೆಯ ಸ್ಥಳ | : | ಹೋಟೆಲ್ ಅಜಂತಾ ಆವರಣ 22ಎ, ಎಂ.ಜಿ.ರಸ್ತೆ, ಬೆಂಗಳೂರು–1 |
| ಪ್ರಕಟಣೆಯ ಅವಧಿ | : | ಮೂರು ತಿಂಗಳಿಗೊಮ್ಮೆ |
| ಮುದ್ರಕರು | : | ಪಿ.ಎಸ್. ವೆಂಕಟೇಶ್ ಬಾಬು ಓಂಕಾರ್ ಆಫ್‌ಸೆಟ್ ಪ್ರಿಂಟರ್ಸ್ ಬೆಂಗಳೂರು – 02 |
| ರಾಷ್ಟ್ರೀಯತೆ | : | ಭಾರತೀಯ |
| ವಿಳಾಸ | : | ಹೊಸ ತರಗುಪೇಟೆ, ಬೆಂಗಳೂರು – 02 |
| ಪ್ರಕಾಶಕರು | : | ಶ್ರೀಮತಿ ಗೀತಾ ವಾಸುದೇವ ರಾವ್ |
| ರಾಷ್ಟ್ರೀಯತೆ | : | ಭಾರತೀಯ |
| ವಿಳಾಸ | : | ಅಧ್ಯಕ್ಷರು, ಆನಂದ ಬಳಗ, 22ಎ ಎಂ.ಜಿ. ರಸ್ತೆ ಬೆಂಗಳೂರು – 01 |

ನಾನು, ಶ್ರೀಮತಿ ಗೀತಾ ವಾಸುದೇವ ರಾವ್, ಈ ಮೂಲಕ ತಿಳಿಯಪಡಿಸುವುದೇನೆಂದರೆ ಮೇಲ್ಕಂಡ ವಿವರಗಳು ನನ್ನ ತಿಳುವಳಿಕೆ ಮತ್ತು ನಂಬಿಕೆಯ ಪ್ರಕಾರ ಸಂಪೂರ್ಣ ಸತ್ಯವಾಗಿದೆ.

ಬೆಂಗಳೂರು ಸಹಿ/–
**20.3.2020** **(ಗೀತಾ ವಾಸುದೇವ ರಾವ್)**

# ಮಹಿಳಾ ವಿಭಾಗದ ಉಲ್ಲಾಸದ ಪ್ರವಾಸ

- ಉಷಾ ಆಚಾರ್ಯ

(ಕಳೆದ ಸಂಚಿಕೆಯಿಂದ ಮುಂದುವರೆದಿದೆ)

ಡಿಸೆಂಬರ್ 3ನೇ ತಾರೀಖು ಬೆಳಿಗ್ಗೆ ನಂದ್ಯಾಲಯದಲ್ಲಿ ಹೋಟೆಲ್ ರೂಂ ಖಾಲಿ ಮಾಡಿ ಹೊರಟವರು 2 ಗಂಟೆಗೆ ಶ್ರೀ ಶೈಲ ತಲುಪಿದೆವು. ಆಂಧ್ರ ಪ್ರದೇಶ ಟೂರಿಸ್ಟ್ ಹೋಟೆಲ್‌ನಲ್ಲಿ ವಾಸ್ತವ್ಯ. ಊಟದ ನಂತರ ಚುಂಚುಲಕ್ಷ್ಮಿ ಟ್ರೈಬಲ್ ಮ್ಯೂಸಿಯಂಗೆ ಹೋದೆವು. ಆದಿವಾಸಿ ಜನರ ಜೀವನ ಶೈಲಿ ಅವರ ರೀತಿ ನೀತಿಗಳ ಬಗ್ಗೆ ಬಹಳ ವಿಸ್ತಾರವಾಗಿ ಮಾದರಿ ಗೊಂಬೆಗಳ ಮೂಲಕ, ವಿನ್ಯಾಸಗಳ ಮೂಲಕ ತೋರಿಸಿದ್ದಾರೆ. ನಂತರ ಸಂಜೆ ವಿಖ್ಯಾತ ಮಲ್ಲಿಕಾರ್ಜುನ ದೇವಾಲಯದ ದರ್ಶನ, ಶಿವನ ಹನ್ನೆರಡು ಜ್ಯೋತಿರ್ಲಿಂಗಗಳಲ್ಲಿ ಒಂದಾದ ಹಾಗೂ ದುರ್ಗೆಯ ಹದಿನೆಂಟು ಶಕ್ತಿ ಪೀಠಗಳಲ್ಲಿ ಒಂದಾದ ಧಾರ್ಮಿಕ ಕ್ಷೇತ್ರ. ನಾವು ಹೋದಾಗ ನಿಜರೂಪ ದರ್ಶನ ಸೇವೆ ನಡೆಯುತ್ತಿತ್ತು. ಪುಟ್ಟದಾದ ಸುಂದರ ಮಲ್ಲಿಕಾರ್ಜುನ ಲಿಂಗವನ್ನು ಮುಟ್ಟಿ ನಮಸ್ಕರಿಸಿ ಧನ್ಯರಾದೆವು. ವಿಶಾಲವಾದ ದೇವಾಲಯದ ಮುಕ್ತ ಮಂಟಪದಲ್ಲಿ ಪೃಥ್ವಿ, ಅಗ್ನಿ, ಜಲ, ಸೂರ್ಯ, ಚಂದ್ರ, ವಾಯು ಲಿಂಗಗಳು. ಅಕ್ಕ ಮಹಾದೇವಿ, ಹೇಮರೆಡ್ಡಿ ಮಲ್ಲಮ್ಮನವರ ವಿಗ್ರಹಗಳನ್ನು ನಿರ್ಮಿಲಾಗಿದೆ. ದೇವಾಲಯದ ಆವರಣದಲ್ಲಿರುವ ಚಿಕ್ಕ ಚಿಕ್ಕ ಗುಡಿಗಳಾದ ವೃದ್ಧ ಮಲ್ಲಿಕಾರ್ಜುನ, ರಾಜೇಶ್ವರ ಲಿಂಗ, ರಾಜರಾಜೇಶ್ವರಿ ದೇವಿ, ಶ್ರೀರಾಮ ಸ್ಥಾಪಿಸಿದ ಸಹಸ್ರ ಲಿಂಗಗಳು, ಪಾಂಡವರು ಸ್ಥಾಪಿಸಿದ 5 ಲಿಂಗಗಳ ದರ್ಶನ ಮಾಡಿದೆವು. ಪಾರ್ವತಿ ದೇವಿ ಭ್ರಮರಾಂಬ ಎಂಬ ಹೆಸರಿನಿಂದ ಪೂಜೆಗೊಳ್ಳುತ್ತಿದ್ದಾಳೆ. ಸುಂದರ ಭ್ರಮರಾಂಬ ಮೂರ್ತಿಯನ್ನು ದರ್ಶನ ಮಾಡಿ ದಿನದ ಕಾರ್ಯಕ್ರಮ ಮುಗಿಸಿದೆವು.

ನಾಲ್ಕನೇ ದಿನದ ನಮ್ಮ ಪ್ರವಾಸ ಪಾತಾಳ ಗಂಗೆ ವೀಕ್ಷಣೆಯಿಂದ ಪ್ರಾರಂಭವಾಯಿತು. ರೋಪ್‌ವೇಯಿಂದ ಕೆಳಗೆ ಸುಮಾರು 150 ಅಡಿ ಕೆಳಗೆ ಹೋದರೆ ಕೃಷ್ಣಾನದಿಯ ಹಿನ್ನೀರಿನ ಪ್ರದೇಶ. ಇಲ್ಲಿ ಸ್ನಾನ ಮಾಡಿದರೆ ಚರ್ಮ ರೋಗ





ಪರಿಹಾರವಾಗುತ್ತದೆ. ಎನ್ನುವ ನಂಬಿಕೆ. ಇಲ್ಲಿಂದ ದ' ದ'ೋಣಿಯಲ್ಲಿ ಅಕ್ಕಮಹಾದೇವಿ ತಪಸ್ಸು ಮಾಡಿದ ಗುಹೆಯನ್ನು ಸಂದರ್ಶಿಸಬಹುದು. ನೀರಿನ ಮಟ್ಟ ಏರಿರುವುದರಿಂದ ನಮಗೆ ದೋಣಿಯಲ್ಲಿ ಹೋಗಲಾಗಲಿಲ್ಲ.

ಶ್ರೀ ಶೈಲದ ಶಿಖರವನ್ನು ನೋಡಿದರೆ ಪುನರ್ಜನ್ಮ ವಿರುವುದಿಲ್ಲ ಎನ್ನುವ ಸ್ಕಂದ ಪುರಾಣದ ಉಕ್ತಿಯಂತೆ ನಾವು ಶಿಖರ ನೋಡಲು ಹೋದೆವು. ಸುಮಾರು 200 ಮೆಟ್ಟಿಲುಗಳನ್ನು ಹತ್ತಿ ಹೋದರೆ ಅಲ್ಲಿಂದ ನಂದಿಯ ಕೋಡಿನ ಮೂಲಕ ಮಲ್ಲಿಕಾರ್ಜುನ ದೇವಾಲಯದ ನಾಲ್ಕು ಶಿಖರಗಳನ್ನು ಕಾಣಬಹುದು. ಶಿಖರದ ಮೇಲೆ ಶ್ರೀರಾಮ ರಾವಣನನ್ನು ಕೊಂದ ಬ್ರಹ್ಮಹತ್ಯ ದೋಷದ ಪರಿಹಾರಕ್ಕಾಗಿ ಸ್ಥಾಪಿಸಿದ ಶಿವಲಿಂಗ ದರ್ಶನ ಮಾಡಿದೆವು. 1860ರಲ್ಲಿ ವಿಜಯನಗರದ ಶ್ರೀ ಕೃಷ್ಣ ದೇವರಾಯ ಈ ದೇವಾಲಯವನ್ನು ಕಟ್ಟಿಸಿದನೆಂದು ತಿಳಿದು ಬರುತ್ತದೆ.

ನಂತರ ಹಾಟಕೇಶ್ವರ ಅಥವಾ ವಟಕೇಶ್ವರ ದೇವಾಲಯ ದರ್ಶನ, ಶಿವಭಕ್ತನಾದ ಕುಂಬಾರ ಕೇಶಪ್ಪನಿಗೆ ಒಡೆದ ಮಡಕೆಯಲ್ಲಿ ದರ್ಶನ ನೀಡಿದ ಶಿವಲಿಂಗವಿದೆ. ಅಲ್ಲಿ ಕುಳಿತು ಧ್ಯಾನ ಮಾಡಿದರೆ ಸಾವಿರ ಸಲದ ಫಲ ಸಿಗುವುದೆಂಬ ನಂಬಿಕೆ. ದೇವಾಲಯದ ಎದುರು ನೆಲ್ಲಿ, ಆಲ, ಹತ್ತಿ ಮರಗಳು ಒಂದಾಗಿರುವ ಸಂತಾನ ವೃಕ್ಷವಿದೆ.

ನಂತರ ಒಂದು ಕೈಯಲ್ಲಿ ಪುಸ್ತಕ ಮತ್ತೊಂದು ಕೈಯಲ್ಲಿ ಲೇಖನಿ ಹಿಡಿದಿರುವ ಗಣಪತಿ ದೇವಾಲಯಕ್ಕೆ ಹೋದೆವು. ಶ್ರೀ ಶೈಲಕ್ಕೆ ಬಂದದಕ್ಕೆ ಸಾಕ್ಷಿ ನೀಡುವ ಸಾಕ್ಷಿ ಗಣಪತಿ ದರ್ಶನ ಮಾಡಿದೆವು. ಅಲ್ಲಿಂದ ನಾಲ್ಕು ಗಂಟೆ ಪ್ರಯಾಣ ಮಾಡಿ ಕರ್ನೂಲು ತಲುಪಿ ಸೂರಜ್ ಗ್ರ್ಯಾಂಡ್ ಹೋಟೆಲ್ನಲ್ಲಿ ವಿರಮಿಸಿದೆವು.

ಮರುದಿನ ಬೆಳಿಗ್ಗೆ ಕರ್ನೂಲಿನಿಂದ ಹೊರಟವರು 4 ಗಂಟೆ ಬಸ್ಸಿನಲ್ಲಿ ಪ್ರಯಾಣದ ನಂತರ ಗಂಡೀಕೋಟ್ ಕೋಟೆಯ ವೀಕ್ಷಣೆಗೆ ಬಂದೆವು. ಬಹಳ ವಿಸ್ತಾರವಾದ ಪಾಳು ಬಿದ್ದ ಕಟ್ಟಡಗಳು, ನೂರಾರು ಮನೆಗಳನ್ನು ಒಳಗೊಂಡ ಪುರಾತನ ಕೋಟೆ, ಕಲ್ಯಾಣಿ ಚಾಲುಕ್ಯರು, ದೆಹಲಿ ಸುಲ್ತಾನರು, ಪೆನ್ನಾಸಾನಿ ನಾಯಕರು ಮುಂತಾದವರ ವಶದಲ್ಲಿದ್ದ ಈ ಕೋಟೆಯನ್ನು

ಪೆನ್ನಾಸಾನಿ ರಾಮಲಿಂಗ ನಾಯಿತು 101 ಗೋಪುರಗಳನ್ನೊಳಗೊಂಡ ಬೃಹತ್ ವಿಶಾಲವಾದ ಕೋಟೆಯನ್ನು ಪುನರ್ನಿಮಿಸಿದನು. ಮುಸಲ್ಮಾನರ ಆಳ್ವಿಕೆಯಲ್ಲಿ ಚಾರ್ ಮಿನಾರ್, ಶಸ್ತ್ರಾಗಾರ, ಜುಮ್ಮಾ ಮಸೀದಿ ಮುಂತಾದ ಕೆಲವು ಕಟ್ಟಡಗಳು ಸೇರ್ಪಡೆಯಾದವು. ಮಾಧವರಾಯ ಮತ್ತು ರಂಗನಾಥ ಸ್ವಾಮಿಯ ದೇವಾಲಯಗಳು ಈ ಕೋಟೆಯೊಳಗೆ ಇವೆ. ಈ ಕೋಟೆಯೊಳಗೆ ಪೆನ್ನಾ ನದಿಯು ಹರಿಯುತ್ತಿದ್ದು ಬಂಡೆಗಳ ಮಧ್ಯೆ ನೀರು ಹರಿದು ಅಮೇರಿಕಾದ ಗ್ರಾಂಡ್ ಕ್ಯಾನಿಯನ್ನಂತೆ ಸುಂದರವಾದ ರಚನೆ ಮಾಡಿದೆ. ಈ ಪ್ರಕೃತಿಯ ನೋಡಲ ಎರಡು ಕಣ್ಣು ಸಾಲದು. ಬಹಳ ಹೊತ್ತು ಈ ಪ್ರಾಕೃತಿಕ ಸೌಂದರ್ಯವನ್ನು ಸವಿದು ಮುಂದೆ ಬೇಲಂ ಗುಹೆಗಳನ್ನು ನೋಡಲು ಹೋದೆವು. ಸಾವಿರಾರು ವರ್ಷಗಳ ಹಿಂದೆ ಸುಣ್ಣದ ಕಲ್ಲಿನ ಬಂಡೆಗಳ ಮಧ್ಯೆ ಚಿತ್ರಾವತಿ ಎಂಬ ನದಿ 5 ಎಕರೆ ಜಾಗದಲ್ಲಿ ಹರಿದು ಈಗ ಬತ್ತಿ ಹೋಗಿ ಗುಹೆಯಾಗಿದೆ. ಈ ಗುಹೆಯ ಅನೇಕ ಮಾರ್ಗಗಳನ್ನು ದ್ವಾರ ಮಂಟಪಗಳನ್ನು, ಗವಿಗಳನ್ನು, ಸುಂದರ ಆಕೃತಿಗಳನ್ನು ಹೊಂದಿ ಮನಸೂರೆಗೊಳ್ಳುತ್ತದೆ. ಈ ಗುಹೆ ಸಾವಿರಾರು ವರ್ಷಗಳಿಂದ ಇದ್ದರೂ 1884ರಲ್ಲಿ ಬ್ರಿಟಿಷ್ ಭೂಗೋಳ ತಜ್ಞ ರಾಬರ್ಟ್ ಬ್ರೂಸ್ ಫೂಟೆ ಎಂಬುವನಿಂದ ಸಾರ್ವಜನಿಕವಾಗಿ ಬೆಳಕಿಗೆ ಬಂತು. ನಂತರ 1982- 83ರಲ್ಲಿ ಜರ್ಮನಿಯ ಡರ್‌ಬರ್ಟ ಡೇನಿಯಲ್ ಗೋಬರ್ ನೇತೃತ್ವದ ತಂಡ ಉತ್ಖಲನ ನಡೆಸಿ ಸುಮಾರು 1½ ಕಿ.ಮೀ. ದೂರದ ವರೆಗೆ ಸಾರ್ವಜನಿಕರಿಗೆ ವೀಕ್ಷಿಸಲು ಬೆಳಕು, ಗಾಳಿ, ಮಾರ್ಗದ ವ್ಯವಸ್ಥೆ ಮಾಡಿದ್ದಾರೆ. ಸಿಂಹದ್ವಾರ, ಕೋಟಿಲಿಂಗ, ಆಲದ ಮರ ಮುಂತಾದ ಆಕೃತಿಗಳು ಮನ ಸೆಳೆಯುತ್ತವೆ. ಸುಮಾರು 1½ ಗಂಟೆಗಳ ಕಾಲ ಗುಹೆಗಳ ವೀಕ್ಷಣೆ ಮಾಡಿ ಅನಂತಪುರಕ್ಕೆ ಬಂದು ವಿರಮಿಸಿದೆವು.

ಡಿಸೆಂಬರ್ 6ನೇ ತಾರೀಖು ಶುಕ್ರವಾರ ನಮ್ಮ ಪ್ರವಾಸದ ಕೊನೆಯ ದಿನ. ಅನಂತಪುರದಿಂದ ಹೊರಟವರು ಸುಮಾರು 100 ಮೆಟ್ಟಲುಗಳ ಮೇಲಿರುವ ಪ್ನನ ಲಕ್ಷ್ಮಿ ನರಸಿಂಹ ದೇವಾಲಯಕ್ಕೆ ಹೋದೆವು. ಈ ದೇವಾಲಯ ಪನ್ನ ನದಿಯ ಪ್ರದೇಶದಲ್ಲಿದೆ. ಇಲ್ಲಿಯು ನರಸಿಂಹಾವತಾರದ ಕಥೆ ದೇವಸ್ಥಾನದಲ್ಲಿ 4-5 ಮದುವೆ ನಡೆಯುತ್ತಿತ್ತು. ಈ ದೇವಾಲಯದ ಹತ್ತಿರವೇ ಉದ್ಭವ ಮಹಾಲಕ್ಷ್ಮಿಯ ದೇವಾಲಯವಿದೆ. ನರಸಿಂಹಾವತಾರಕ್ಕಾಗಿ ಹೇಳದೇ ತೆರಳಿದ ಮಹಾವಿಷ್ಣುವಿನ ಮೇಲೆ ಬೇಸರಗೊಂಡು ಪಾತಾಳಕ್ಕೆ ತೆರಳಿದಳಂತೆ. ಲಕ್ಷ್ಮಿಯನ್ನು ಬಿಟ್ಟಿರಲಾರದ ವಿಷ್ಣು ಧಾವಿಸಿ ಬಂದು ಲಕ್ಷ್ಮಿಯ ಮುಡಿ ಎಳೆದನಂತೆ. ಉದ್ಭವ ಲಕ್ಷ್ಮಿ ವಿಗ್ರಹದಲ್ಲಿ ಲಕ್ಷ್ಮಿಯ ಮುಡಿ ಮತ್ತು ಅರ್ಧ ದೇಹ ಮೂಡಿ ಬಂದಿದೆ.



ಅಲ್ಲಿಂದ ಮುಂದೆ ಲೇಪಾಕ್ಷಿ ದೇವಾಲಯ ದರ್ಶನ ಶ್ರೀರಾಮಚಂದ್ರ ಸೀತಾನ್ವೇಷಣಕ್ಕೆ ಹೊರಟಾಗ ಈ ಸ್ಥಳದಲ್ಲಿ ಗಾಯಗೊಂಡು ಬಿದ್ದಿರುವ ಜಟಾಯು ಪಕ್ಷಿಯನ್ನು ಕಂಡನು. ರಾವಣನು ಸೀತೆಯನ್ನು ದಕ್ಷಿಣ ದಿಕ್ಕಿನಲ್ಲಿ ಕರೆದುಕೊಂಡು ಹೋಗಿದ್ದಾನೆ ಎಂದು ಹೇಳಿ ಮೃತನಾದ ಜಟಾಯುವನ್ನು ಲಯ ಜಟಾಯು ಎಂದು ರಾಮ ಕರೆದನಂತೆ. ಲಯ ಎಂಬ ತೆಲುಗು ಶಬ್ಧದ ಅರ್ಥ ಮೂರ್ಛೆ ಎಂದು. ರಾಮ ರಾವಣರಿಗೆ ಯುದ್ಧವಾದಾಗ ಸೀತೆ ಅಲ್ಲಿ ಕಾಲಿಟ್ಟಿದ್ದಳು ಎಂಬ ಐಹಿತ್ಯದಲ್ಲಿ ಅಲ್ಲಿ ಸೀತೆ ಪಾದದ ಅಚ್ಚು ಬಂಡೆಯ ಮೇಲಿದೆ. ವಿಜಯನಗರದ ಅರಸು ಅಚ್ಯುತರಾಯನ ಕೋಶಾಧಿಕಾರಿ ವಿರೂಪಣ್ಣ 1522 ರಲ್ಲಿ ದೊಡ್ಡ ಆಮೆಯ ಆಕಾರದ ಬಂಡೆಯ ಮೇಲೆ ತಳಪಾಯ ಇಲ್ಲದೆ. ಕಟ್ಟಿದ ಸುಂದರ ದೇವಾಲಯ. ಮುಖ್ಯ ದೇವರು ವೀರಭದ್ರ ಪೂರ್ಣಗೊಳ್ಳದ ಸುಂದರವಾದ ಲತಾ ಮಂಟಪ, 280 ವಿವಿಧ ಮಾದರಿ ಚಿತ್ರಗಳಿಂದ ಕೂಡಿದೆ. ಹಂಪಣ್ಣ ಜಕ್ಕಣ್ಣ ಎಂಬ ಶಿಲ್ಪಿಗಳು 876 ಕಂಬಗಳ 730 ವಿವಿಧ ಶಿಲ್ಪ ಚಿತ್ರಗಳ ಭವ್ಯ ದೇವಾಲಯವನ್ನು ನಿರ್ಮಿಸಿದ್ದಾರೆ. ಇಲ್ಲಿಂದ ನಮ್ಮ ಪ್ರಯಾಣ ಬೆಂಗಳೂರಿಗೆ. 8 ಗಂಟೆಗೆ ವುಡ್‌ಲ್ಯಾಂಡ್ಸ್ ಹೋಟೆಲ್‌ಗೆ ಬಂದಿಳಿದೆವು. ಹೆಚ್ಚಿನ ಸಂಖ್ಯೆಯಲ್ಲಿ ಹಿರಿಯ ನಾಗರೀಕರಿದ್ದ ಪ್ರವಾಸ ಯಾರಿಗೂ ಯಾವ ರೀತಿಯ ತೊಂದರೆಯಾಗದೇ ಸಮಾಪ್ತಿಯಾದುದು ಸವಾಡವೇ ಸರಿ. ಅಹೋಬಲದ ಕಾಡಿನ ದಾರಿಯೇ ಇಲ್ಲದ ದಾರಿಯಲ್ಲಿ ಎರಡು ಗಂಟೆ ನಡೆದಿದ್ದು, ಯಗಂಡಿ ದೇವಾಲಯದ ಸೌಮದರ್ಯ, ಬೇಲಂ ಗುಹೆಯ ಸುಂದರ ದೃಶ್ಯಗಳು ಶ್ರೀ ಶೈಲದ ಶಿಖರ ಬಸ್ಸಿನಲ್ಲಿ ನಮ್ಮ ಹಾಡುಗಳು, ಭಜನೆಗಳು, ಆಟಗಳು, ನಾನಾನ ತರದ ತಿಂಡಿಗಳು, ಶೋಭಾ ಮತ್ತು ಮೀನರವ ಮೇಲ್ವಿಚಾರಣೆ, ಪ್ರತಿಯೊಂದು ಸದಾ ಕಾಲದಲ್ಲಿ ನೆನಪಿನಲ್ಲಿ ಉಳಿಯುವಂತಹದ್ದು ಅಹೋಬಲದ ನವ ನರಸಿಂಹ ಎಲ್ಲರಿಗೂ ಶುಭವನ್ನುಂಟು ಮಾಡಲಿ! ಆನಂದ ಬಳಗದ ಮುಂದಿನ ಪ್ರವಾಸಕ್ಕೆ ಕಾಯುತ್ತಿರೋಣ.

# ನಿನ್ನ ಮೆಚ್ಚಲೇಬೇಕು ಕರೋನಾ..

**ಕರೋನಾದ ಅಟ್ಟಹಾಸ ಮತ್ತು ಅದು ಕಲಿಸಿದ ಪಾಠದ ಬಗ್ಗೆ ಮಾರ್ಮಿಕವಾಗಿ ಚಿತ್ರಿಸಲಾಗಿದೆ ಈ ಕವನದಲ್ಲಿ. ಲೇಖಕರ ಬಗ್ಗೆ ಮಾಹಿತಿ ಇಲ್ಲ. ವಾಟ್ಸಾಪ್‌ನಿಂದ ಎರವಲು ಪಡೆದದ್ದು. ಅಜ್ಞಾತ ಕರ್ತೃಗಳ ಅನುಮತಿಯ ನಿರೀಕ್ಷೆಯೊಂದಿಗೆ : ಸಂ**

ಕಣ್ಣಿಗೆ ಕಾಣದೆ ಮಳೆ, ಗಾಳಿ ಬಿಸಿಲಿನ್ನು ಲೆಕ್ಕಿಸದೆ
ನಿಶ್ಯಬ್ದವಾಗಿ ಜಗತ್ತಿನಾದ್ಯಂತ ಹಬ್ಬಿದ
ನಿನ್ನ ಛಲ ಮೆಚ್ಚಲೇಬೇಕು ಕರೋನ

ಮಸೀದಿ, ಮಂದಿರ, ಚರ್ಚ್‌ಗಳ ತಂಟೆಗೆ ಹೋದರೆ
ಸರಕಾರವೇ ಬೀಳುತ್ತಿತ್ತು, ರಕ್ತದ ಕೋಡಿ ಹರಿಯುತ್ತಿತ್ತು,
ಒಂದು ಮಾತನಾಡದೆ ಅವುಗಳನ್ನು ಮುಚ್ಚಿಸಿ
ದೇವರು ಎಲ್ಲಾ ಕಡೆ ಇದ್ದಾನೆಂದು ತೋರಿಸಿದ ನಿನ್ನ
ರೀತಿಗೆ ಎಲ್ಲರೂ ಮೆಚ್ಚಲೇಬೇಕು ಕರೋನಾ.

ಎಲ್ಲಾ ಟಿವಿಗಳಲ್ಲಿ ಭಯ ಹುಟ್ಟಿಸುವ
ಭವಿಷ್ಯಕಾರರನ್ನು ಮೂಲೆಗುಂಪು ಮಾಡಿದ
ನಿನ್ನ ಚಾಣಾಕ್ಷತನಕ್ಕೆ ಮೆಚ್ಚಲೇಬೇಕು ಕರೋನ..

ಒಂದು ತಿಂಗಳು ಮದ್ಯಪಾನ ಇಲ್ಲದೆ
ಇರಬಹುದೆಂದು ತೋರಿಸಿಕೊಟ್ಟು,
ನಂತರ ಮುಜರಾಯಿ ತೀರ್ಥಕ್ಕಿಂತ
ಅಬಕಾರಿ ತೀರ್ಥವೇ ಮೇಲೆಂದು ತಿಳಿಸಿದ
ನಿನ್ನನ್ನು ಮೆಚ್ಚಲೇಬೇಕು ಕರೋನ..

ಅದ್ದೂರಿತನಕ್ಕೆ ಕಡಿವಾಣ ಹಾಕಿ
ಮದುವೆಗಳನ್ನು 50 ಜನರನ್ನ ಮಾತ್ರ ಸೇರಿಸಿ ಸರಳವಾಗಿ,
ಅರ್ಥಪೂರ್ಣವಾಗಿ
ಮಾಡಬಹುದು ಎಂದು ತೋರಿಸಿಕೊಟ್ಟ
ನಿನ್ನ ಪರಿಯನ್ನ ಎಲ್ಲರೂ ಮೆಚ್ಚಲೇಬೇಕು ಕರೋನ..

ಸತ್ತರೆ ಯಾರು ಹಿಂದೆ ಬರಲ್ಲ ಅಂತ ತಿಳಿಸಿ
ಅಂತ್ಯಸಂಸ್ಕಾರಕ್ಕೆ ನಿಜವಾದ ದುಃಖತಪ್ತರು
20 ಜನರು ಸಾಕು ಎಂದು ಅರ್ಥೈಸಿದ
ನಿನ್ನ ರೀತಿಯನ್ನ ಮೆಚ್ಚಲೇಬೇಕು ಕರೋನ..

ಮಾಲ್, ಮಲ್ಟಿಪ್ಲೆಕ್ಸ್, ಪಬ್ ಕ್ಲಬ್ಬುಚ್ಚಿ
ಬಸ್, ರೈಲು, ವಿಮಾನಗಳಿಲ್ಲದೆ
ಸಿನೆಮಾ ನಾಟಕ ಬಿಟ್ಟು
ಮನೆಯವರ ಜೊತೆಗೆ ಸುಖವಾಗಿ ಇರಬಹುದೆಂದು
ತೋರಿಸಿಕೊಟ್ಟ ನಿನ್ನ ಪ್ರೀತಿ ಮೆಚ್ಚಲೇಬೇಕು ಕರೋನಾ..

ಮಾರ್ಕ್ಸ್ ಪಡೆಯುವುದೆ ಜೀವನವಲ್ಲ
ನಿಜವಾದ ಪಾಠಶಾಲೆ ಜೀವನಾನುಭವ,
ನಮ್ಮ ಅಂತರಾತ್ಮವೇ ನಿಜವಾದ
ಪರೀಕ್ಷೆಯ ಕೊಠಡಿ ಎಂದು ತೋರಿಸಿದ
ಚಾಣಕ್ಯನ ನೀತಿ ಮೆಚ್ಚಲೇಬೇಕು ಕರೋನ..

ಊರುಬಿಟ್ಟು ಎಲ್ಲೆಲ್ಲೋ ಹೋದವರನ್ನು
ಮತ್ತೆ ಕರೆಯಿಸಿ ಹುಟ್ಟಿದ ಊರು, ಒಕ್ಕಲುತನ
ಹೊಟ್ಟೆಗೆ ಅನ್ನ ಹಾಕುತ್ತವೆಂದು ತಿಳಿಸಿದ
ನಿನ್ನ ಮಹಿಮೆ ಮೆಚ್ಚಲೇಬೇಕು ಕರೋನ.

ಎಷ್ಟು ಆಸ್ತಿ, ಬಂಗಾರ ಇದ್ದರೂ ಆರೋಗ್ಯ ಮುಖ್ಯ,
ಬಡವ, ಶ್ರೀಮಂತ ಯಾರಾದರೂ ಪ್ರಾಣ ಮುಖ್ಯ
ಎಂದು ಮತ್ತೊಮ್ಮೆ ತಿಳಿಸಿದ
ನಿನ್ನ ಮೆಚ್ಚಲೇಬೇಕು ಕರೋನ.

ತಂತ್ರಜ್ಞಾನದಿಂದ ಎಲ್ಲಾ ಗ್ರಹಗಳನ್ನು ಸುತ್ತಿದರೂ,
ಮನುಷ್ಯ ವಿಜ್ಞಾನದಲ್ಲಿ ಎಷ್ಟೇ ಮುಂದುವರೆದರೂ
ಕಾಲಕ್ಕೆ ಶರಣಾಗಬೇಕೆಂದು ತಿಳಿಸಿದ ಪರಿ
ಮೆಚ್ಚಲೇಬೇಕು ಕರೋನ.

ಅಣುಬಾಂಬ್, ಯುದ್ಧವಿಮಾನ, ಟ್ಯಾಂಕರ್‌ಗಳು
ಸಾವಿರ ಇದ್ದು, ಮುಂದುವರಿದ ದೇಶವೆಂದು
ಮೆರೆಯುತ್ತಿದ್ದರೂ ಸಾಂಕ್ರಾಮಿಕ ರೋಗಕ್ಕೆ
ಶರಣಾಗಬೇಕೆಂದು ತಿಳಿಸಿದ್ದು ಮೆಚ್ಚಲೇಬೇಕು ಕರೋನ..

ಸಸ್ಯಾಹಾರ ಶ್ರೇಷ್ಠ ಎಂದು ಹೇಳುತಾ
ಪ್ರಕೃತಿಯನ್ನು ಕಾಪಾಡಿದರೆ ನಾವು ಉಳಿಯುತ್ತೇವೆ
ಎಲ್ಲಾ ಧರ್ಮಗಳು ಪೊಳ್ಳು ನಿಜವಾದ ಧರ್ಮ
ಮನುಜಧರ್ಮವೆಂದು ಹೇಳಿದ್ದು ಮೆಚ್ಚಲೇಬೇಕು ಕರೋನ..

ಜಗತ್ತಿನ ಕಹಿಸತ್ಯಗಳನ್ನು ಬಿಡಿ, ಬಿಡಿಯಾಗಿ
ತೋರಿಸಿಕೊಟ್ಟು ಸನ್ಮಾರ್ಗದಿ ನಡೆಯಿರೆಂದು ಹೇಳಿದ
ನಿನ್ನಶಕ್ತಿ, ಯುಕ್ತಿಯ ಕರೋನಾಗೀತ
ಎಲ್ಲರೂ ಮೆಚ್ಚಲೇಬೇಕು ಕರೋನ....

ಸಾಕಿನ್ನು ಮನುಷ್ಯ ಸುಸ್ತಾಗಿದ್ದಾನೆ.
ಬಿಟ್ಟುಬಿಡು, ಬದುಕಲಿ
ಇನ್ನಾದರೂ ಪಶ್ಚಾತ್ತಾಪದೊಂದಿಗೆ
ಇಷ್ಟಕ್ಕೂ ಬುದ್ಧಿ ಬರಲಿಲ್ಲವೆಂದರೆ
ಭಗವಂತನ ಆಟ ಬಲ್ಲವರಾರು??

*With Best Compliments From :*

# M. BHASKAR RAO



## ಶ್ರೀ ಗಣೇಶ ಸ್ಟೀಲ್ ಸೆಂಟರ್

# 12, S.L.N. Charties Building, Vanivilasa Institute Road
Kalasipalyam Post, Bangalore - 560 002
Phone : Shop : 2670 9752 / Residence : 2669 5751

ಶುಭಾಶಯಗಳೊಡನೆ,

## ಬಿ.ಗಣಪತಿ ಹೆಬ್ಬಾರ್



## ಶ್ರೀ ಅಕ್ಷಯ ಉಪಾಹಾರ್

**ವಿ.ವಿ.ಐ. ರಸ್ತೆ, ಫೋರ್ಟ್**
**ಬೆಂಗಳೂರು 560 002**
**ಮೊಬೈಲ್ : 99724 29854**



## ಬೃಂದಾವನ ಗೆಸ್ಟ್ ಹೌಸ್

## BRINDAVANA GUEST HOUSE

*Posh, Homely Veg, P.G. for Ladies & Gents, with all Amenities.*

At No 9, 2nd Cross, 3rd Phase, 5th Block,
Bhuvaneshwari Nagar
BSK 3rd Stage, Bangalore - 560 085
E-mail : rajapanambur@yahoo.co.in

Prop.: **Ashokraj P** - **Mob : 99860 40802**

ವಿ.ಸೂ. : ಎಲ್ಲಾ ಕಡೆಗಳಿಗೆ ಉತ್ತಮ ಸಾರಿಗೆ ಸಂಪರ್ಕ ಹೊಂದಿರುವ ಬನಶಂಕರಿ ಕೇಂದ್ರ ಭಾಗದಲ್ಲಿ ಇರುವ ಎಲ್ಲಾ ಅನುಕೂಲಗಳನ್ನು ಹೊಂದಿರುವ ಸುಸಜ್ಜಿತ ಪೇಯಿಂಗ್‌ಗೆಸ್ಟ್ ಸವಲತ್ತನ್ನು ಆನಂದ ಬಳಗದ ಸದಸ್ಯರು ಪರಿಚಯಿಸುವ ಅತಿಥಿಗಳಿಗೆ ಸೂಕ್ತ ರಿಯಾಯಿತಿ ದರದಲ್ಲಿ ನೀಡಲಾಗುವುದು.

# ಸುದ್ದಿ - ಸಂಗ್ರಹ

- ಬಳಗದ ಅಧ್ಯಕ್ಷೆಯಾಗಿರುವ ಶ್ರೀಮತಿ ಗೀತಾ ವಾಸುದೇವರಾವ್ ಮತ್ತು ಹೋಟೆಲ್ ಉಡ್‌ಲ್ಯಾಂಡ್‌ನ ಮಾಲಿಕರಾದ ಶ್ರೀ ಕೆ. ವಾಸುದೇವ ರಾವ್ ರವರ ಮೊಮ್ಮಗ ಹಾಗೂ ಶ್ರೀ ಕೆ. ಪ್ರಾಣೇಶ್ ರಾವ್ ಮತ್ತು ಶ್ರೀಮತಿ ಲಕ್ಷ್ಮೀರಾವ್ ದಂಪತಿಗಳ ಸುಪುತ್ರ ಚಿ. ವಾಸುದೇವ ಎಂಬ ವಟುವಿನ ಬ್ರಹ್ಮೋಪದೇಶವು ದಿ.26.3.2020 ರಂದು ಶ್ರೀ ಪೂರ್ಣ ಪ್ರಜ್ಞ ವಿದ್ಯಾಪೀಠದಲ್ಲಿ ಶಾಸ್ತ್ರೋಕ್ತವಾಗಿ ನೆರವೇರಿದೆ. (ಬಳಗದ ಸದಸ್ಯರು ಹಾಗೂ ನೂರಾರು ಹಿತೈಷಿಗಳು, ಬಂಧು-ಬಳಗದವರ ಸಮ್ಮುಖದಲ್ಲಿ ನಡೆಯಬೇಕಾದ ಈ ಶುಭ ಸಮಾರಂಭವನ್ನು ಕೋವಿಡ್-19ನ ಅಡಚಣೆಯಿಂದಾಗಿ, ಸರಳವಾಗಿ ಆದರೆ ವಿದ್ಯುಕ್ತವಾಗಿ ನೆರವೇರಿಸುವುದು ಅನಿವಾರ್ಯವಾಯಿತು).


- ಆನಂದ ಬಳಗದ ಜೊತೆ ಕಾರ್ಯದರ್ಶಿ ಶ್ರೀ ಸಂದೀಪ್ ರಾವ್ ಮತ್ತು ಶ್ರೀಮತಿ ಸುಧಾ ದಂಪತಿಗಳ ಸುಪುತ್ರ ಚಿ. ಸಿದ್ಧಾಂತ ಎಂಬ ವಟುವಿನ ಬ್ರಹ್ಮೋಪದೇಶವು ದಿನಾಂಕ 28.2.2020ರಂದು ಉಡುಪಿಯ ಶ್ರೀ ಗುರು ರಾಘವೇಂದ್ರ ಮಠದಲ್ಲಿ ವಿದ್ಯುಕ್ತವಾಗಿ ನೆರವೇರಿದೆ.

- ಬಳಗದ ಸಕ್ರಿಯ ಸದಸ್ಯ ದಂಪತಿಗಳಾದ ಶ್ರೀ ಎನ್. ಎಸ್. ಹೊಳ್ಳ ಮತ್ತು ಶ್ರೀಮತಿ ಸೀತಾ ಹೊಳ್ಳ ರವರ ಸುಪುತ್ರಿ ಸೌ.ಸ್ವಾತಿಯವರ ವಿವಾಹ ಶ್ರೀಮತಿ ಪ್ರಿಯಾ ಮತ್ತು ಡಾ. ರಾಜೇಂದ್ರ ರವರ ಸುಪುತ್ರ ಚಿ. ವೆಂಕಟೇಶ್ ಎಂಬ ವರನೊಡನೆ ದಿನಾಂಕ 7.11.2019 ರಂದು ಬೆಂಗಳೂರಿನ ಶ್ರೀ ವೆಂಕಟಾದ್ರಿ ಕಲ್ಯಾಣ ಮಂಟಪದಲ್ಲಿ ವಿಜೃಂಭಣೆಯಿಂದ ನೆರವೇರಿದೆ. ಆರತಕ್ಷತೆ ಕಾರ್ಯಕ್ರಮವೂ ಅದೇ ದಿನ ಸಂಜೆ ನಡೆದಿರುತ್ತದೆ.



ಬಳಗದ ಹಿರಿಯ ಸದಸ್ಯರಾಗಿದ್ದ ಶ್ರೀ ಎನ್. ಲಕ್ಷ್ಮೀನಾರಾಯಣ ಕೊಳತ್ತಾಯ (87) ರವರು ದಿನಾಂಕ 20.5.2020 ರಂದು ನಿಧನರಾಗಿರುತ್ತಾರೆ. ಮೃತರ ಆತ್ಮಕ್ಕೆ ಬಳಗದ ಶ್ರದ್ಧಾಂಜಲಿ.

# ಭಾವಪೂರ್ಣ ಶ್ರದ್ಧಾಂಜಲಿ




ಬೆಂಗಳೂರಿನ ಗುಂಡೋಪಂತ್ ರಸ್ತೆಯಲ್ಲಿರುವ ಶ್ರೀ ಕೃಷ್ಣ ಮಂದಿರದ ರೂವಾರಿಯಾಗಿದ್ದ ಶ್ರೀ ಇನ್ನ ವಾಸುದೇವ ಆಚಾರ್ಯರು (96) ದಿನಾಂಕ 28.03.2020 ರಂದು ದೈವಾಧೀನರಾಗಿದ್ದಾರೆ. ಮೃತರ ಆತ್ಮಕ್ಕೆ ಶ್ರದ್ಧಾಂಜಲಿ. ದಿವಂಗತರ ಧರ್ಮಪತ್ನಿ ಶ್ರೀಮತಿ ಪದ್ಮಾ ವಾಸುದೇವ ಆಚಾರ್ಯ ರವರನ್ನು ದಿನಾಂಕ 23.2.2014 ರಂದು ನಡೆದ ಬಳಗದ 26ನೇ ವಾರ್ಷಿಕೋತ್ಸವದಲ್ಲಿ ಸನ್ಮಾನಿಸಿರುವುದನ್ನು ಇಲ್ಲಿ ಸ್ಮರಿಸಬಹುದು.




ನಾಡಿನ ಜನಪ್ರಿಯ ಕನ್ನಡ ಸಿನೆಮಾ ಮತ್ತು ಕಿರುಪರದೆಯ ಕಲಾವಿದೆ ಹಾಗೂ ಬಳಗದ ಹಿತೈಷಿಗಳಾಗಿದ್ದ ಶ್ರೀಮತಿ ಕಿಶೋರಿ ಬಲ್ಲಾಳ್‌ರವರು ದಿನಾಂಕ.18.02.2020 ರಂದು ನಿಧನರಾಗಿದ್ದಾರೆ.1960ರಲ್ಲಿ ಇವಳೆಂತಹ ಹೆಂಡ್ತಿ ಎಂಬ ಸಿನಿಮಾದ ಮೂಲಕ ತನ್ನ ಕಲಾಜೀವನವನ್ನು ಆರಂಭಿಸಿದ ಕಿಶೋರಿ ಬಲ್ಲಾಳ್ 72 ಸಿನಿಮಾಗಳಲ್ಲಿ ನಟಿಸಿರುತ್ತಾರೆ.ಝೀ ಸಿನಿಮಾ ಪ್ರಶಸ್ತಿ, ಐಐಎಫ್‌ಎ ಉತ್ತಮ ಪೋಷಕ ನಟಿ ಮೊದಲಾದ ಹಲವಾರು ಪ್ರಶಸ್ತಿಗಳು ಇವರಿಗೆ ಲಭಿಸಿವೆ. ದಿವಂಗತರಿಗೆ ಬಳಗದ ಶ್ರದ್ಧಾಂಜಲಿ.



ಪ್ರಸಿದ್ಧ ಹೋಟೆಲ್ ಉದ್ಯಮಿ ಹಾಗೂ ಬಳಗದ ಪೋಷಕರಾದ ಶ್ರೀ ಬಿ. ಗಣಪತಿ ರಾವ್ ರವರ ಧರ್ಮಪತ್ನಿ ಶ್ರೀಮತಿ ಶ್ಯಾಮಲ ರವರು ದಿನಾಂಕ 4.4.2020 ರಂದು ವಿಧಿವಶರಾಗಿದ್ದಾರೆ. ಮೃತರಿಗೆ ಬಳಗದ ಶ್ರದ್ಧಾಂಜಲಿ.




ನಮ್ಮ ಬಳಗದ ಸಕ್ರಿಯ ಹಿರಿಯ ಸದಸ್ಯರಾಗಿದ್ದ ಶ್ರೀ ಕೃಷ್ಣಮೂರ್ತಿ ಭಟ್‌ರವರು ದಿನಾಂಕ 6.6.2020ರಂದು ದೈವಾಧೀನ ರಾಗಿದ್ದಾರೆ. ಬಳಗದಲ್ಲಿ ಚಿರಪರಿಚಿತ ಹಾಗೂ ಉತ್ಸಾಹೀ ಯುವ ಸದಸ್ಯರಾಗಿರುವ ಶ್ರೀ ಪ್ರಕಾಶ್ ಭಟ್ ಮತ್ತು ಶ್ರೀ ರಾಜೇಶ್ ಭಟ್‌ರವರ ತೀರ್ಥರೂಪರಾಗಿರುವ ಆ ಕೃಷ್ಣಮೂರ್ತಿ ಭಟ್‌ರವರ ಆತ್ಮಕ್ಕೆ ಭಗವಂತ ಸದ್ಗತಿ ನೀಡಲಿ



ಕನ್ನಡ ಸಾಹಿತ್ಯದ ಸೇವೆಯನ್ನು ಮುಂಬೈನಲ್ಲಿ ಬಹು ದೊಡ್ಡ ಪ್ರಮಾಣದಲ್ಲಿ ಮಾಡುತ್ತಿದ್ದ ಹೆಚ್.ಬಿ. ಎಲ್. ರಾವ್ ಎಂದೇ ಪ್ರಸಿದ್ಧರಾಗಿದ್ದ ಶ್ರೀ ಹೆಜಮಾಡಿ ಬಾಗಿಲ್ತಾಯ ಲಕ್ಷ್ಮೀನಾರಾಯಣ ರಾವ್ (87) ರವರು ದಿನಾಂಕ 23.4.2020ರಂದು ಮುಂಬೈನಲ್ಲಿ ನಿಧನರಾಗಿದ್ದಾರೆ. ಮುಂಬೈ ಸಾಹಿತ್ಯ ಬಳಗದ ಸಂಸ್ಥಾಪಕರಾಗಿದ್ದ ಅವರು ಶಿವಳ್ಳಿ ಪ್ರತಿಷ್ಠಾನ ಮುಂಬಯಿ, ಕರ್ನಾಟಕ ಸಾಹಿತ್ಯ ಪರಿಷತ್, ಮಹಾರಾಷ್ಟ್ರ ಘಟಕ, ಕರ್ನಾಟಕ ಯಕ್ಷಗಾನ ಅಕಾಡೆಮಿ, ಕರ್ನಾಟಕ ತುಳು ಸಾಹತ್ಯ ಅಕಾಡೆಮಿ ಮೊದಲಾದ ಹಲವಾರು ಸಂಸ್ಥೆಗಳಲ್ಲಿ ತೊಡಗಿಸಿಕೊಂಡು ಕನ್ನಡ ಮತ್ತು ತುಳು ಸಾಹಿತ್ಯ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಮೃತರ ಆತ್ಮಕ್ಕೆ ಬಳಗದ ಗೌರವಪೂರ್ಣ ಶ್ರದ್ಧಾಂಜಲಿ.

## ಸಾಹಿತ್ಯ ಸಮ್ಮೇಳನದಲ್ಲಿ ಪ್ರೊ॥ ಪುತ್ತೂರಾಯರಿಗೆ ಸನ್ಮಾನ



ಕಲಬುರ್ಗಿಯಲ್ಲಿ 2020ರ ಫೆಬ್ರವರಿ 5, 6 ಮತ್ತು 7 ರಂದು ನಡೆದ 85ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ರಾಜ್ಯದ 50 ಸಾಧಕರನ್ನು ಗುರುತಿಸಿ ಬೃಹತ್ ಸಮಾರಂಭದಲ್ಲಿ ಸನ್ಮಾನಿಸಲಾಯಿತು. ಮಾಜಿ ಕೇಂದ್ರ ಹಾಗೂ ರಾಜ್ಯ ಸಚಿವರಾದ ಶ್ರೀ ಮಲ್ಲಿಕಾರ್ಜುನ ಖರ್ಗೆ ಯವರು, ಸಮ್ಮೇಳನಾಧ್ಯಕ್ಷರಾದ ಡಾ. ಹೆಚ್. ಎಸ್. ವೆಂಕಟೇಶ ಮೂರ್ತಿ ಹಾಗೂ ಕನ್ನಡ ಸಾಹಿತ್ಯ ಸಂಸತ್ತಿನ ಅಧ್ಯಕ್ಷರಾದ ನಾಡೋಜ ಡಾ. ಮನು ಬಳಿಗಾರ್ ರವರು ಸಾಧಕರನ್ನು ಸನ್ಮಾನಿಸಿದರು.

ಈ ಸನ್ಮಾನಿತರ ಪೈಕಿ ನಮ್ಮ ಬಳಗದ ಹಿರಿಯ ಸದಸ್ಯರಾದ ಜನಪ್ರಿಯ ವಾಗ್ಮಿ, ಲೇಖಕರು, ಚಿಂತಕರು ಹಾಗೂ ಶಿಕ್ಷಣ ತಜ್ಞರಾದ ಡಾ॥ ಕೆ.ಪಿ. ಪುತ್ತೂರಾಯರೂ ಒಬ್ಬರು ಎಂಬುದು ಬಳಗಕ್ಕೆ ಹೆಮ್ಮೆಯ ವಿಚಾರ. ಡಾ॥ ಪುತ್ತೂರಾಯರಿಗೆ ಹಾರ್ದಿಕ ಶುಭಾಶಯಗಳು.


## ಭೃಗುವಾಣಿಯಲ್ಲಿ ಜಾಹೀರಾತಿಗಾಗಿ ಮನವಿ

ಭೃಗುವಾಣಿ ತ್ರೈಮಾಸಿಕ ಪತ್ರಿಕೆಯು, ಆನಂದ ಬಳಗದ ಸುಮಾರು 2000 ಸದಸ್ಯರಿಗೆ ತಲುಪುತ್ತಿದೆ. ಹಾಗೂ ಇತರ ಪ್ರಮುಖ ಸಂಘ–ಸಂಸ್ಥೆಗಳಿಗೂ ಕಳುಹಿಸಲಾಗುತ್ತಿದೆ. ಅಂದರೆ ಭೃಗುವಾಣಿಯ ಒಟ್ಟಾರೆ ಸಂಖ್ಯೆ ಸುಮಾರು 10 ಸಾವಿರದಷ್ಟಿದ್ದು, ಈ ಪತ್ರಿಕೆ ತಮ್ಮ ಉತ್ಪನ್ನಗಳನ್ನು ಮತ್ತು ಸೇವೆಗಳನ್ನು ಪರಿಚಯಿಸಲು ಪ್ರಭಾವಶಾಲಿಯಾದ ಹಾಗೂ ಪರಿಣಾಮಕಾರಿಯದ ಮಾಧ್ಯಮ.

| ಜಾಹೀರಾತು ದರಗಳು (ಪ್ರತಿ ಸಂಚಿಕೆಗೆ) | | |
|---|---|---|
| 2, 3 ಮತ್ತು ಹಿಂಬದಿ ಬಹುವರ್ಣ ರಕ್ಷಾಪುಟ | : | ರೂ.3,000/– |
| ಬಹುವರ್ಣ – ಒಳಪುಟ | : | ರೂ.2,000/– |
| ಕಪ್ಪು ಬಿಳುಪು – ಒಳಪುಟ | : | ರೂ.1,500/– |
| ಅರ್ಧಪುಟ | : | ರೂ.750/– |
| ಕಾಲುಪುಟ | : | ರೂ.400/– |

ಜಾಹೀರಾತು ನೀಡಿ ಪ್ರೋತ್ಸಾಹಿಸಲು ಆಸಕ್ತಿಯುಳ್ಳವರು ಸಂಪರ್ಕಿಸಬೇಕಾದ ವಿಳಾಸ :

**ಶ್ರೀ ವೈ. ರಾಧಾಕೃಷ್ಣ**
ಮಾಜಿ ಕೋಶಾಧಿಕಾರಿ, ಆನಂದ ಬಳಗ (98440 58851)

**ಶ್ರೀ ಬಿ.ಎಸ್. ಬಾಲಚಂದ್ರ ತೋಳ್ಪಾಡಿ**
ಕೋಶಾಧಿಕಾರಿ, ಆನಂದ ಬಳಗ (94481 34268)







**Available at all Ayurvedic Medical Stores**

Manufactured by
**Bangalore Pharmaceutical & Research Laboratory (P) Ltd.**
No.163, Reservoir Street, Basavanagudi, Bengaluru - 560 004. INDIA
Consumer Care No. : 080-41208661 | Website: www.bprl.in

Bhruguvani (Apr-June 2020) Regd. with RNI under No.KARKAN/2012/45587 No. of Pages : 36 (32+4)




If undelivered please return to:
**Ananda Balaga**
Hotel Ajantha Complex, 22A, M.G. Road
Bengaluru - 560 001
Phone : 2559 4457

Published by Smt. Vijayalakshmi Bhat S., President, Ananda Balaga, Bengaluru - 01 Printed by Omkar Offset Printers, Bengaluru - 02